ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ]
ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8
ಸಂಚಿಕೆ 1
ಜನವರಿ 19, 1986
ಬೆಲೆ 60 ಪೈಸೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ

12 ನೇ ಕಾಂಗ್ರೆಸ್ : ಉಕ್ಕಿ ಹರಿದ ಉತ್ಸಾಹ

ಪಿ. ರಾಮಚಂದ್ರರಾವ್

1985 ಡಿಸೆಂಬರ್ 25 ರಿಂದ 30ರ ವರೆಗೆ ನಡೆದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 12 ನೇ ಅಧಿವೇಶನದಲ್ಲಿ ಕರ್ನಾಟಕದಿಂದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಪಿ. ರಾಮಚಂದ್ರರಾಯರ ನೇತೃತ್ವದಲ್ಲಿ 5ಪ್ರತಿನಿಧಿಗಳು ಮತ್ತು 2 ವೀಕ್ಷಕರು – ಕಾಮ್ರೇಡ್ ಸೂರ್ಯನಾರಾಯಣರಾಯರು, ಸಿ. ನಂಜುಂಡಪ್ಪನವರು, ವಿ.ಜೆ.ನಾಯರ್, ಕೆ. ಆರ್. ಶ್ರೀಯಾನ್, ಅಬ್ರಾಹಂ ಕರ್ಕಡ ಮತ್ತು ಕೆ.ಎಂ. ವೆಂಕಟೇಶ್- ಭಾಗವಹಿಸಿದ್ದರು.

ಕರಡು ರಾಜಕೀಯ ಠರಾವಿನ ಕುರಿತು ಕಾ|| ಸೂರ್ಯನಾರಾಯಣ ರಾಯರು ಮಾತಾಡುತ್ತಾ, "ವಿಜಯವಾಡದ 11ನೇ ಸಮ್ಮೇಳನದಲ್ಲಿ ಪಕ್ಷವು ಕೈಗೊಂಡ ರೀತಿಯ ಆಧಾರದಲ್ಲಿ ಕರ್ನಾಟಕದಲ್ಲಿ ನಾವು ಕಾರ್ಯನೆಸಗುತ್ತಾ ಬಂದು ಒಂದೆಡೆ ಸಾಮೂಹಿಕ ಸಂಘಟನೆಗಳನ್ನು ಕಟ್ಟುತ್ತಾ ಬ- ವಾಗ ಇನ್ನೊಂದೆಡೆ ಜನಸಾಮಾನ್ಯರನ್ನು ಬಾಧಿಸುವ ಹಲವಾರು ಪ್ರಮುಖ ಪ್ರಶ್ನೆಗಳ ಕುರಿತು ಸಾಮೂಹಿಕ ಚಳವಳಿಗಳನ್ನು ನಡೆಸಿದೆವು" ಎಂದು ಹೇಳಿದರು- 1985 ರಲ್ಲಿ ಕರ್ನಾಟಕಕ್ಕೆ ಕೇಂದ್ರದಿಂದ ಬರಬೇಕಾಗಿದ್ದ ಅಭಿವೃದ್ಧಿ ಯೋಜನೆಗಳು ಇನ್ನೂ ಅಮಲಿಗೆ ಬಾರದಿದ್ದುದರ ಕುರಿತು, ಕನಿಷ್ಟ ಕೂಲಿ ಜ್ಯಾರಿಯಾಗದಿದ್ದುದರ ಕುರಿತು ಮತ್ತು ಜನತಾ ಪಕ್ಷದ ಇತ್ತೀಚೆಗಿನ ಜನತೆಯ ಜೀವನದ ಮೇಲೆ ಹೊರೆಗಳನ್ನು ಹೇರುವ ನೀತಿ ವಿರುದ್ಧ ಸಾಮೂಹಿಕ ಕಾರ್ಯಕ್ರಮಗಳನ್ನು, ಬಂದ್ ಕಾರ್ಯಚರಣೆಯನ್ನು ಏರ್ಪಡಿಸಿರುದರ ಬಗ್ಗೆ ವಿವರಣೆಯನ್ನಿತ್ತರು

ಕರಡು ರಾಜಕೀಯ - ಸಂಘಟನಾ ವರದಿಯ ಕುರಿತು ಕರ್ನಾಟಕದ ಪ್ರತಿನಿಧಿಗಳ ಪರವಾಗಿ ಕಾ|| ವಿ. ಜೆ. ಕೆ. ನಾಯರ್ ಮಾತಾಡಿದರು. "ಸಿಐಟಿಯು, ಪ್ರಾಂತ ರೈತ ಸಂಘ, ವಿದ್ಯಾರ್ಥಿ ಸಂಘಟನೆ, ಡಿವೈಎಫ್ಐ ಮೊದಲಾದ ಸಂಘಟನೆಗಳ ಚಟುವಟಿಕೆಗಳು ಬೆಳೆಯುತ್ತಾ ಬಂದಿವೆ. ಸದಸ್ಯತನ ಹೆಚ್ಚಿದೆ. ರಾಜ್ಯದಲ್ಲಿ ಕಾರ್ಮಿಕ ವರ್ಗದ ರಾಜಕೀಯ ಚಳುವಳಿಯು ಬೆಳೆದಿದೆ. ಆದರೆ ಆ ಪ್ರಮಾಣದಲ್ಲಿ ಮಾರ್ಕ್ಸ್‌ವಾದಿ ಪಕ್ಷವು ಬೆಳೆಯಲಿಲ್ಲ. ಸಾಲ್ಕಿಯಾದಲ್ಲಿ ಈ ಕುರಿತು ಪಾರ್ಟಿ ವಿಷದವಾಗಿ ಮತ್ತು ಸ್ಪಷ್ಟವಾಗಿ ಮಾರ್ಗದರ್ಶನ ಮಾಡಿದರೂ ಅದನ್ನು ಜ್ಯಾರಿಗೊಳಿಸುವುದರಲ್ಲಿ ನಾವು ಹಿಂದೆ ಬಿದ್ದಿದ್ದೇವೆ." ಎಂದು ಅವರು ವಿವರಿಸಿದರು.

ಅಧಿವೇಶನದಲ್ಲಿ ಆರಿಸಲ್ಪಟ್ಟ ಹೊಸ ಕೇಂದ್ರ ಸಮಿತಿಗೆ ಕರ್ನಾಟಕದಿಂದ ಕಾಮ್ರೇಡ್ ಪಿ. ರಾಮಚಂದ್ರರಾಯರು ಆರಿಸಲ್ಪಟ್ಟಿದ್ದಾರೆ.

ಈ ಅಧಿವೇಶನದಲ್ಲಿ ಮೊದಲಿಂದ ಕೊನೆಯವರೆಗೆ ಭಾಗವಹಿಸಿದ ಅನುಭವದ ಆಧಾರದಲ್ಲಿ ಕೆಲವು ಅಭಿಪ್ರಾಯಗಳನ್ನು ಇಲ್ಲಿ ನಾನು ಐಕ್ಯರಂಗದ ಓದುಗರೊಡನೆ ವಿನಿಮಯ ಮಾಡಿಕೊಳ್ಳಲಿಚ್ಚಿಸುತ್ತೇನೆ.

ಉತ್ಸವದ ವಾತಾವರಣ

ಕಲ್ಕತ್ತಾದ ಒಂದು ಕೊನೆಯಲ್ಲಿರುವ ಲೇಕ್ ಏರಿಯಾದಲ್ಲಿ ಅಧಿವೇಶನ ನಡೆಸಿದರೂ, ಕಲ್ಕತ್ತಾ ಮತ್ತು ಸುತ್ತು ಮುತ್ತಲಿನ ಜಿಲ್ಲೆಯ ಜನ ಮಾತ್ರ ಜಾತ್ರೆಗೆ ಬಂದಂತೆ "ಸ್ಟೇಡಿಯಂ" ಮೈದಾನಕ್ಕೆ ಅಧಿವೇಶನ ನಡೆದ ದಿನಗಳೆಲ್ಲಾ ಬರುತ್ತಿದ್ದರು. ಎಲ್ಲಾ ತರದ ಪ್ರಗತಿಪರ ಪುಸ್ತಕಗಳನ್ನು ಮಾರಾಟ ಮಾಡುವ 12 ಸ್ಟಾಲುಗಳನ್ನು ಏರ್ಪಡಿಸಿದ್ದರು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕೊ-ಆಪರೇಟಿವ್‌ಗಳು ತಯಾರಿಸಿದ ಎಲ್ಲಾ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಇತ್ತು. 1945 ರಿಂದ 1985 ರ ವರೆಗೆ ಬಂಗಾಳದಲ್ಲಿ ನಡೆದು ಬಂದ ಕಾರ್ಮಿಕ ವರ್ಗದ ರಾಜಕೀಯ ಚಳವಳಿಯ ಚರಿತ್ರೆಯ ಪ್ರದರ್ಶನವಿತ್ತು. ಮೂರು ತಾತ್ಕಾಲಿಕ ರಂಗ ಭೂಮಿಗಳನ್ನು ರಚಿಸಿ ಅದರಲ್ಲಿ ಮ 3 ರಿಂದ ರಾತ್ರಿ 8ರ ವರೆಗೆ ಪಶ್ಚಿಮ ಬಂಗಾಳದ ಎಲ್ಲಾ ಜಿಲ್ಲೆಗಳಿಂದಲೂ, ತ್ರಿಪುರ, ಬಿಹಾರ, ತಮಿಳುನಾಡು ಮತ್ತು ಆಂಧ್ರ ರಾಜ್ಯಗಳಿಂದ ಬಂದ ಕಲಾ ಮಂಡಳಿಗಳಿಂದ ನಾಟಕ, ನೃತ್ಯ, ಕ್ರಾಂತಿಕಾರಿ ಹಾಡು ಇತ್ಯಾದಿ ಕಲಾಕೃತಿಗಳ ಶ್ರೀಮಂತ ಅನುಭವವನ್ನು ಜನರಿಗೆ ಉಣಿಸುತ್ತಿದ್ದರು. ಕ್ರಾಂತಿಯೇ ಒಂದು ಉತ್ಸವ ಎಂದು ಲೆನಿನ್ ಕರೆದಿದ್ದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಧಿವೇಶನವನ್ನೇ ಒಂದು ಉತ್ಸವವಾಗಿ ನಡೆಸಿದರು. ಪಶ್ಚಿಮ ಬಂಗಾಳದ ಪಕ್ಷವು ಸಮಿತಿ.

ಸ್ವಯಂ ಸೇವಕರ ವ್ಯವಸ್ಥೆ

ಅಧಿವೇಶನದ ಎಲ್ಲಾ ಕೆಲಸ ಕಾರ್ಯಗಳನ್ನು ಕಾಲ ಕಾಲಕ್ಕೆ ನಡೆಸಿಕೊಂಡು ಹೋಗುವುದಕ್ಕೆ ಪ್ರತ್ಯೇಕ ಪ್ರತ್ಯೇಕ ಸ್ವಯಂ ಸೇವಕರ ತಂಡಗಳನ್ನು ಉಸ್ತುವಾರಿ ಸಮಿತಿಗಳನ್ನು ರಚಿಸಿದ್ದರು. ಪ್ರತಿನಿಧಿಗಳನ್ನು ರೈಲ್ವೆ, ಬಸ್ ನಿಲ್ದಾಣಗಳಲ್ಲಿ ಸ್ವಾಗತಿಸುವಲ್ಲಿಂದ ಹಿಡಿದು ಅವರು ತಮ್ಮ ತಮ್ಮ ರಾಜ್ಯಗಳಿಗೆ ಹೋಗುವ ದಿನದವರೆಗೆ ವ್ಯವಸ್ಥೆ ಮಾಡಿದ್ದರು. ರಾತ್ರಿ ಹಗಲ ರಕ್ಷಣಾ-ಕಾವಲು ವ್ಯವಸ್ಥೆಮಾಡಿದ್ದರು. ಸ್ವಯಂ ಸೇವಕರಲ್ಲಿ ಸ್ತ್ರೀಯರೂ ಸಾಕಷ್ಟು ಸಂಖ್ಯೆಯಲ್ಲಿ ಪಾಲುಗೊಂಡಿದ್ದರು. 15 ಲಕ್ಷದಷ್ಟು ದೊಡ್ಡ

[8ನೇ ಪುಟ ನೋಡಿ]

ಬರಗಾಲದ ರಾಜಕೀಯ ಅರ್ಥಶಾಸ್ತ್ರ

ಜಿ. ಎನ್. ನಾಗರಾಜ್

ಬರಗಾಲ, ನೆರೆ (ಪ್ರವಾಹ) ಇವುಗಳೆಲ್ಲಾ ಪ್ರಕೃತಿಯ ವಿಕೋಪವೆಂದು ಶತ ಶತಮಾನಗಳಿಂದ ಬರಗಾಲದಲ್ಲಿ ಹಸಿವಿಗೆ ಪ್ರಾಣ ತೆರುವುದೊಂದೇ ದಾರಿ ಎಂಬ ನಂಬಿಕೆಯನ್ನೇ ಅವಲಂಬಿಸಿ ನಮ್ಮ ದೇಶದ ಹಾಗೂ ರಾಜ್ಯದ ಸರಕಾರಗಳು, ನಾವು ಮಾಡಬಹುದಾದುದನ್ನೆಲ್ಲಾ ಮಾಡುತ್ತಿದ್ದೇವೆ. ಇಷ್ಟರ ಮೇಲೆ ಇದು ಮಾನವನ ಯತ್ನಕ್ಕೆ ಮೀರಿದ್ದು ಎಂಬ ಭಾವನೆಯನ್ನು ಮೂಡಿಸಲು ಯತ್ನಿಸುತ್ತಿದ್ದೇವೆ. ಈಗಾಗಲೇ ನಾವು ಬರಗಾಲ ಪರಿಹಾರಕ್ಕಾಗಿ ವಿಪರೀತವಾಗಿ ಹಣ ವೆಚ್ಚ ಮಾಡಿದ್ದೇವೆ, ಇದಕ್ಕಿಂತ ಹೆಚ್ಚಾಗಿ ಏನೂ ಮಾಡಲಾಗದು ಎನ್ನುವ ರಾಜೀವ ಗಾಂಧಿಯವರು, ಬರಗಾಲದ ವಿಷಯದಲ್ಲಿ ಕೇಂದ್ರ ಸರಕಾರ ಏನೂ ಮಾಡುತ್ತಿಲ್ಲ, ನಾವು "ಓವರ್ ಡ್ರಾಫ್ಟ್" ಪಡೆಯುವುದಕ್ಕೆ ಆರಂಭಿಸುತ್ತೇವೆ ಎಂದು ಒಮ್ಮೆ ಬೆದರಿಸಿ, ಮರುದಿನವೇ ಕೇಂದ್ರದ ಸಚಿವರು ಕೇಂದ್ರದ ಜವಾಬ್ದಾರಿ ಬಹಳ ಅಲ್ಪ, ಎಲ್ಲಾ ಜವಾಬ್ದಾರಿ ರಾಜ್ಯಗಳದ್ದೇ ಎಂದು ಹೇಳುತ್ತಿರುವಾಗಲೇ, ಕೇಂದ್ರ ರಾಜ್ಯದ ಬರಗಾಲ ಪರಿಹಾರಕ್ಕಾಗಿ ಬಹಳ ಸಹಾಯ ಮಾಡಿದೆ, ರಾಜೀವ ಗಾಂಧಿಯವರಂತೂ ರಕ್ಷಣವೇ (!!! ಯಾವ ರಕ್ಷಣ ಎಂಬುದು ಹೆಗ್ಗಡೆಯವರಿಗಷ್ಟೇ ಗೊತ್ತು.) ಕ್ರಮ ತೆಗೆದುಕೊಂಡರು ಎಂದು ಹುಚ್ಚಾಬಟ್ಟೆ ಹೊಗಳಿದರು. ಈ ಎಲ್ಲಾ ಡೊಂಬರಾಟಗಳ ಹಿಂದಿನ ಸತ್ಯವೇನು ಎಂಬುದನ್ನು ರಾಜ್ಯದ ಕೃಷಿಕ ಸಮುದಾಯಕ್ಕೆ, ಎಲ್ಲಾ ಜನತೆಗೆ ತಿಳಿಸಬೇಕಾಗಿದೆ.

ಬರಗಾಲ–ನೆರೆ, ಹದಗೆಟ್ಟ ಮಾನವ – ಪ್ರಕೃತಿ ಸಂಬಂಧದ ಸಾಕಾರರೂಪ

ತಾನೇ ಸ್ವತಃ ಪ್ರಕೃತಿಯ ಅಂಗವಾದ, ಪ್ರಕೃತಿಯ ಏಕಮಾತ್ರ ಪ್ರಜ್ಞಾವಂತ ಅಂಶವಾದ ಮಾನವ ತನ್ನ ಜನನದ ಆದಿಯಿಂದಲೂ ಸುತ್ತಣ ಪ್ರಕೃತಿಯೊಂದಿಗೆ ಹೋರಾಡುತ್ತಾ, ಕ್ರಮ ಕ್ರಮವಾಗಿ ಪ್ರಕೃತಿಯ ನಿಗೂಢ ರಹಸ್ಯಗಳನ್ನು ಹೊರ ಹಾಕುತ್ತಾ, ಅದನ್ನೇ ವಿಜ್ಞಾನವನ್ನಾಗಿಸಿ, ತಂತ್ರಜ್ಞಾನವನ್ನಾಗಿಸಿ ಪ್ರಕೃತಿಯನ್ನು ತನ್ನ ಅನುಕೂಲಕ್ಕೆ ಹೊಂದಿಸಿಕೊಳ್ಳುವ, ತಾನು ಪ್ರಕೃತಿ ರಚನೆಗೆ ಹೊಂದಿಕೊಳ್ಳುವ ಕೆಲಸವನ್ನು ನಿರಂತರ ನಡೆಸುತ್ತಲೇ ಬಂದಿದ್ದಾನೆ. ಹೀಗಾಗಿಯೇ ಅತ್ಯಂತ ಭೀಕರವಾದ ಮಂಜಿನಲ್ಲಿ-ಐಸ್‌ಲ್ಯಾಂಡ್ ಗ್ರೀನ್‌ಲ್ಯಾಂಡ್ ದ್ವೀಪಗಳ ಮೇಲೆ ಬೆಂಕಿಯುಗುಳುವ ಅಗ್ನಿ ಪರ್ವತಗಳ ತಪ್ಪಲಲ್ಲಿ - ಜಪಾನಿನಲ್ಲಿ ಅಷ್ಟೇ ಏಕೆ ಭಾರತದ ವಿಜ್ಞಾನಿಗಳೂ ಸೇರಿದಂತೆ ಜಗತ್ತಿನ ಹತ್ತಾರು ರಾಷ್ಟ್ರಗಳು ಊಹಿಸಲೂ ಕೂಡ ಸಾಧ್ಯವಾಗದ ಅಂಟಾರ್ಟಿಕಾದಲ್ಲಿ ವಾಸ ಮಾಡುತ್ತಿದ್ದಾನೆ ಇವೆಲ್ಲವೂ ಪ್ರಕೃತಿಯ ಅನುಕೂಲಗಳನ್ನು ಇಡೀ ಮಾನವ ಸಮಾಜದ ಹಿತಕ್ಕಾಗಿ ಬಳಸುತ್ತಾ, ಅನಾನುಕೂಲಗಳ ವಿರುದ್ಧ ರಕ್ಷಣಾತ್ಮಕ ಕ್ರಮಗಳನ್ನು ವಹಿಸುತ್ತಾ ಹೋದರೆ ಪ್ರಕೃತಿ ಮಾನವನ ಸಂಬಂಧ ಮಧುರವಾಗಿರಲು ಸಾಧ್ಯವೆಂಬುದನ್ನು ಸಾಬೀತುಪಡಿಸುತ್ತವೆ.

ಅಂಟಾರ್ಟಿಕಾದ ವಿರುದ್ಧ ಪ್ರಕೃತಿಯ ಮಡಿಲಲ್ಲಿಯೂ, ತಂತ್ರಜ್ಞಾನದ ಅತ್ಯುತ್ತಮ ಅಂಶಗಳನ್ನು ಬಳಸಿ ಅದಕ್ಕೆ ತಕ್ಕ ಸಂಪನ್ಮೂಲದ ವಿನಿಯೋಗಮಾಡಿದರೆ ಪ್ರಕೃತಿಯೊಡನೆ ಸುಮಧುರ ಸಂಬಂಧ ಸಾಧ್ಯವೆನ್ನುವಾಗ ಮಾನವ ಹತ್ತಾರು ಸಾವಿರ ವರ್ಷಗಳಿಂದ ನೆಲಸಿ ವಿಕಾಸಗೊಂಡಿರುವ ನೆಲೆಗಳಲ್ಲಿ

(8ನೇ ಪುಟ ನೋಡಿ)

ವಿಶೇಷ ಸಂಚಿಕೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 12ನೇ ಕಾಂಗ್ರೆಸ್‌ನಲ್ಲಿ ಪಕ್ಷದ ಪಿ ಬಿ. ಸದಸ್ಯರು ವರದಿಗಳನ್ನು ಮಂಡಿಸುವಾಗ, ಚರ್ಚೆಗೆ ಉತ್ತರಿಸುವಾಗ ಮಾಡಿದ ಭಾಷಣಗಳ ಸಂಗ್ರಹ ರೂಪವನ್ನು ಹಾಗೂ ಅಂಗೀಕರಿಸಿದ ವಿವಿಧ ನಿರ್ಣಯಗಳನ್ನು "ಮ್ಯಾಗಜೀನ್" ಆಕಾರದಲ್ಲಿ 60 ಪುಟದ ವಿಶೇಷ ಸಂಚಿಕೆಯಾಗಿ "ಐಕ್ಯರಂಗ" ನೀಡಲಿದೆ. 26-1-86 ರಂದು ಹೊರಬರಲಿರುವ ಈ ಸಂಚಿಕೆಯನ್ನು ಉಲ್ಲೇಖನೀಯ ಪುಸ್ತಿಕೆಯಾಗಿ ಕಾದಿರಿಸಿಕೊಳ್ಳಬಹುದಾದ್ದರಿಂದ ಹೆಚ್ಚಿಗೆ ಪ್ರತಿಗಳು ಬೇಕಾದಲ್ಲಿ ಮೊದಲೇ ಬರೆದು ತಿಳಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕರು

ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಕಾರ್ಮಿಕರ ನಿಯಂತ್ರಣ

– ವಿ. ಐ. ಲೆನಿನ್

ಭಾಗ 4 : ಟೈಲರ್ ಪದ್ಧತಿ-ಯಂತ್ರದಿಂದ ಮಾನವನ ಗುಲಾಮಗಿರಿ

ಟಿಪ್ಪಣಿ :

ಫ್ರೆಡರಿಕ್ ವಿನ್‌ಸ್ಲೊ ಟೈಲರ್ (1856-1915) ಅಮೇರಿಕದ ಒಬ್ಬ ಇಂಜಿನಿಯರ್. ಕೈಗಾರಿಕಾಕರಣದ ಪ್ರಾರಂಭದಲ್ಲಿ ಕೆಲಸದ ದಿನಗಳನ್ನು ಅತ್ಯಧಿಕ ಮಟ್ಟದಲ್ಲಿ ಬಳಸುವಂತೆ ಕಾರ್ಮಿಕರನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿಸುವ ಮತ್ತು ಉತ್ಪಾದನಾ ಸಾಧನ ವಿಧಾನಗಳನ್ನು ವಿವೇಚನೆಯಿಂದ ಬಳಸುವ ಪದ್ಧತಿಯನ್ನು ಕಂಡು ಹಿಡಿದವನು ಟೈಲರ್. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕ ಜನತೆಯ ಶೋಷಣೆಯನ್ನು ಇನ್ನಷ್ಟು ತೀವ್ರಗೊಳಿಸಲು ಟೈಲರ್ ಪದ್ಧತಿಯನ್ನು ಬಳಸಲಾಗುತ್ತಿದೆ. ನಂತರ ಈ ಪದ್ಧತಿಯು ವೈಜ್ಞಾನಿಕ ಆಡಳಿತ (scientific managememt) ಎಂದು ಹೆಸರು ಪಡೆಯಿತು. ಕಾರ್ಖಾನೆಗಳೊಳಗಿನ ಕಾರ್ಮಿಕರ ಕೆಲಸದ ವೇಳೆಯನ್ನು ಮತ್ತು ಅವರ ಉತ್ಪಾದನ ಸಾಧನ ವಿಧಾನಗಳನ್ನು ಅತ್ಯಧಿಕ ಮಟ್ಟದಲ್ಲಿ ಬಳಸಲೆಣಿಸುವ ಈ ಪದ್ಧತಿಯು, ಕಾರ್ಖಾನೆಗಳ ಹೊರಗೆ ಸಮಾಜದಲ್ಲಿ ಅಸಂಖ್ಯಾತರ ನಿರುದ್ಯೋಗದಿಂದ ಕೆಲಸದ ದಿನಗಳು ವ್ಯರ್ಥವಾಗುವುದರ ಕುರಿತಾಗಲೀ, ಕಾರ್ಖಾನೆಗಳಿಗೆ ಕಚ್ಚಾಸಾಮಗ್ರಿಗಳನ್ನೂ ಗ್ರಾಹಕರಿಗೆ ಸಿದ್ಧ ವಸ್ತುಗಳನ್ನೂ ಸಾಗಿಸುವಾಗ ಅನವಶ್ಯಕ ಮಧ್ಯಮ ವರ್ಗಗಳಿಂದ ಸಂಭವಿಸುವ ಖರ್ಚು ವೆಚ್ಚಗಳ ಕುರಿತಾಗಲೀ ಯಾವ ಪರಿಹಾರವನ್ನೂ ನೀಡುವುದಿಲ್ಲ.

ಆಧುನೀಕರಣ, ಯಾಂತ್ರೀಕರಣ, ಗಣಕೀಕರಣಗಳಿಂದ ಕಾರ್ಖಾನೆಗಳೊಳಗಿನ ಕಾರ್ಮಿಕರ ಕೆಲಸದ ವೇಳೆಯು ಅತ್ಯಧಿಕ ಮಟ್ಟದಲ್ಲಿ ಉತ್ಪಾದನೆಗೆ ಬಳಸಲ್ಪಟ್ಟು, ಕಡಿಮೆ ಸಂಖ್ಯೆಯ ಕಾರ್ಮಿಕರಿಂದ ಅಧಿಕ ಪ್ರಮಾಣದ ಉತ್ಪಾದನೆ ಯಾಗುವುದೇನೋ ನಿಜ. ಆದರೆ, ಉತ್ಪಾದನಾ ಸಾಧನ ವಿಧಾನಗಳ ಯಜಮಾನತ್ವವು ಬಂಡವಾಳಶಾಹಿಗಳದ್ದೇ ಆಗಿರುವುದರಿಂದ, ಅಧಿಕ ಉತ್ಪಾದನೆಯ ಲಾಭವು ಅವರಿಗೆ ಸೇರುವುದಲ್ಲದೆ ಕಾರ್ಮಿಕರಿಗೆ ಸೇರುವುದಿಲ್ಲ ಬಂಡವಾಳ ಶಾಹಿ ಸಮಾಜದಲ್ಲಿ ವೈಚಾರಿಕತೆ, ವೈಜ್ಞಾನಿಕತೆ, ಕಾರ್ಖಾನೆಗಳೊಳಗೆ ಮಾತ್ರ ಅನುಸರಿಸಲಾಗುತ್ತಿದ್ದು, ಹೊರಗಿನ ಸಮಾಜವು ಅಸಮಾನತೆ, ಅವ್ಯವಸ್ಥೆ, ಅರಾಜಕತೆ, ಗಳಿಗೊಳಗಾಗಿರುವುದನ್ನು ಲೆನಿನ್ ತನ್ನ ಈ ಚಿಕ್ಕ ಲೇಖನದಲ್ಲಿ ಸರಳ ಸ್ಪಷ್ಟವಾಗಿ ಕಾರ್ಮಿಕ ವರ್ಗಕ್ಕೆ ತಿಳಿಸಿದ್ದಾರೆ. ಕಾರ್ಖಾನೆಗಳೊಳಗಿನ ವಿಜ್ಞಾನಿಗಳು, ಇಂಜಿನಿಯರುಗಳು ಸಮಾಜಿಕ ವಿಜ್ಞಾನಿಗಳಾಗಿ, ಇಂಜಿನಿಯರುಗಳಾಗಿ ಬೆಳೆಯ ಬೇಕೆಂದೂ, ಶ್ರಮಿಕ ವರ್ಗವು ಬಂಡವಾಳ ದಾಸ್ಯದಿಂದ ಮುಕ್ತಗೊಂಡು ಸಾಮಾಜಿಕ ಉತ್ಪಾದನೆಯನ್ನು ವಶಪಡಿಸಿಕೊಂಡಾಗ, ಕಾರ್ಖಾನೆಗಳು ಕಾರ್ಮಿಕ ಸಂಘಗಳ, ಸಮಿತಿಗಳ ಆಡಳಿತಕ್ಕೊಳಗಾದಾಗ ಮಾತ್ರ ಹಾಗಾಗುವುದು ಸಾಧ್ಯ ಎಂದು ಲೆನಿನ್ ತಿಳಿಸಿದ್ದಾರೆ. ಈ ಲೇಖನ 13-3-1914 ರಲ್ಲಿ ಮೊದಲು ಪ್ರಕಟವಾಗಿಯಿತು.

ಟೈಲರ್ ಪದ್ಧತಿ-ಯಂತ್ರದಿಂದ ಮಾನವನ ಗುಲಾಮಗಿರಿ

ಬಂಡವಾಳ ಶಾಹಿ ಪದ್ಧತಿಯು ಅರೆ ಕ್ಷಣವೂ ಕಟಸ್ಥವಾಗಿರಲಾರದು. ಅದು ನಿರಂತರವಾಗಿ ಮುಂದುವರಿಯುತ್ತಿರಲೇಬೇಕು. ಸಧ್ಯದ ವಿಷಮ ಪರಿಸ್ಥಿತಿಯಲ್ಲಿ ಪೈಪೋಟಿಯು ತೀವ್ರವಾಗುತ್ತಿದ್ದು, ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಲು ಹೊಸ ವಿಧಾನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅನ್ವೇಶಿಸಲಾಗುತ್ತಿದೆ. ಆದರೆ, ಬಂಡವಾಳದ ಮೇಲ್ಮೈಯಿಂದಾಗಿ, ಈ ಎಲ್ಲಾ ವಿಧಾನಗಳೂ ಕಾರ್ಮಿಕರನ್ನು ಇನ್ನಷ್ಟು ಶೋಷಿಸುವ ಅಸ್ತ್ರಗಳಾಗಿ ಪರಿವರ್ತನಗೊಳ್ಳುತ್ತಿವೆ. ಟೈಲರ್ ಪದ್ಧತಿಯು ಇವುಗಳಲ್ಲಿ ಒಂದು ವಿಧಾನವಾಗಿದೆ

ಈ ಪದ್ಧತಿಯ ಪ್ರತಿಪಾದಕರು ಇತ್ತೀಚೆಗೆ ಅಮೇರಿಕದಲ್ಲಿ ಈ ಕೆಳಗಿನ ವಿಧಾನಗಳನ್ನು ಬಳಸಿದರು.

ಒಬ್ಬ ಕೆಲಸಗಾರನ ತೋಳಿಗೆ ಒಂದು ವಿದ್ಯುತ್ ದೀಪವನ್ನು ಬಂಧಿಸಿದರು. ಅವನ ಚಲನ ವಲನಗಳ ಛಾಯಾ ಚಿತ್ರಗಳನ್ನು ತೆಗೆದರು. ದೀಪದ ಚಲನವಲನಗಳನ್ನೂ ಅಧ್ಯಯನ ಮಾಡಿದರು. ಪರಿಣಾಮವಾಗಿ ಕೆಲವು ಚಲನವಲನಗಳು ಅನಗತ್ಯ ಎಂದು ಅವರಿಗೆ ತಿಳಿದು ಬಂತು. ಕೆಲಸಗಾರರು ಅವುಗಳನ್ನು ಹೋಗಲಾಡಿಸಬೇಕೆಂದು ಅವರು ಅಭಿಪ್ರಾಯ ಪಟ್ಟರು. ಪರಿಣಾಮವಾಗಿ, ಕೆಲಸಗಾರನು ಒಂದು ಕ್ಷಣವನ್ನೂ ವಿಶ್ರಾಂತಿಗಾಗಿ ಹಾಳು ಮಾಡದೆ ಇನ್ನೂ ಹೆಚ್ಚಿನ ಕಾಳಜಿಯಿಂದ ದುಡಿಯುವಂತೆ ನೋಡಿ ಕೊಳ್ಳಲಾಯಿತು !

ಕಚ್ಚಾವಸ್ತುಗಳನ್ನು ಕಾರ್ಖಾನೆಗೆ ಒಯ್ದು ಮುಟ್ಟಿಸಲು, ಅವುಗಳನ್ನು ಒಂದು ಶಾಖೆಯಿಂದ ಇನ್ನೊಂದು ಶಾಖೆಗೆ ಸಾಗಿಸಲು, ಸಿದ್ಧವಸ್ತುಗಳನ್ನು ಹೊರಗೆ ರವಾನಿಸಲು, ಒಂದು ಕ್ಷಣವೂ ನಷ್ಟವಾಗದಂತೆ ಕಾರ್ಖಾನೆಯ ಕಟ್ಟಡಗಳ ಯೋಜನೆಯನ್ನು ರೂಪಿಸಲಾಗುತ್ತಿದೆ. ಅತ್ಯುತ್ತಮ ಕೆಲಸದ ವಿಧಾನಗಳನ್ನು ಅಧ್ಯಯನ ಮಾಡಲು ಛಾಯಾ ಚಿತ್ರಗಳನ್ನು ಕ್ರಮ ಬದ್ಧವಾಗಿ ಉಪಯೋಗಿಸಲಾಗುತ್ತಿದೆ. ಪರಿಶ್ರಮವನ್ನು ಹೆಚ್ಚಿಸಲಾಗುತ್ತಿದೆ. ಅಂದರೆ ಕೆಲಸಗಾರರ ಶ್ರಮದ ವೇಗವನ್ನು ಹೆಚ್ಚಿಸಲಾಗುತ್ತಿದೆ. (Speeding up]

ಉದಾಹರಣೆಗೆ ಯಂತ್ರ ಕೆಲಸಗಾರನೊಬ್ಬನ ಕಾರ್ಯವಿಧಾನಗಳ ಛಾಯಾ ಚಿತ್ರವನ್ನು ಇಡೀ ದಿನ ತೆಗೆಯುತ್ತಾರೆ. ಆ ಕೆಲಸಗಾರನ ಚಲನವಲನಗಳನ್ನು ಅಧ್ಯಯನನಡೆಸಿದ ನಂತರ ಕಾರ್ಯದಕ್ಷತೆಯ ಪರಿಣಿತರು ಅವನು ಆಗಾಗ ಬಾಗುವುದರಿಂದ ಒದಗಬಹುದಾದ ಸಮಯದ ನಷ್ಟವನ್ನು ಹೋಗಲಾಡಿಸಲು ಅವನಿಗೆ ಸಾಕಷ್ಟು ಎತ್ತರದ ಆಸನವನ್ನು ಕೊಡುತ್ತಾರೆ. ಅವನ ಸಹಾಯಕ್ಕಾಗಿ ಇನ್ನೊಬ್ಬ ಹುಡುಗನನ್ನು ನೇಮಿಸುತ್ತಾರೆ. ಯಂತ್ರದ ಪ್ರತಿಯೊಂದು ಭಾಗವನ್ನು ಈ ಹುಡುಗನು ಬಂದು ನಿಶ್ಚಿತ ಹಾಗೂ ಸಮರ್ಥ ರೀತಿಯಲ್ಲಿ ಯಂತ್ರ ಕೆಲಸಗಾರನ ಕೈಗೆ ಎತ್ತಿ ಕೊಡಬೇಕು. ಕೆಲವೇ ದಿನಗಳಲ್ಲಿ ಯಂತ್ರ ಕೆಲಗಾರನು ನಿರ್ದಿಷ್ಟವಾದ ಒಂದು ಯಂತ್ರವನ್ನು ಹಿಂದಿನ ಸಮಯದ ಕಾಲಂಶದಷ್ಟು ಕಾಲಾವಧಿಯಲ್ಲಿ ಜೋಡಿಸಲು ಸಮರ್ಥನಾಗುತ್ತಾನೆ!

ಉತ್ಪಾದನಾ ಹೆಚ್ಚಳದಲ್ಲಿ ಎಂತಹ ಗಣನೀಯವಾದ ಸಾಧನೆ ! ಆದರೆ, ಕೆಲಸಗಾರನ ಸಂಬಳವೇನೂ ನಾಲ್ಕು ಪಾಲು ಹೆಚ್ಚಾಗಲಿಲ್ಲ. ಅಬ್ಬಬ್ಬ ಎಂದರೆ, ಅರ್ಧಾಂಶದಷ್ಟು ಹೆಚ್ಚಾಗಿರಬಹುದು ಅದು ಕೂಡಾ ಅಲ್ಪಾವಧಿಯವರೆಗೆ ಮಾತ್ರ. ಕೆಲಸಗಾರರು ಹೊಸ ವಿಧಾನಕ್ಕೆ ಹೊಂದಿಕೊಳ್ಳುತ್ತಿದ್ದಂತೆ ಅವರ ಸಂಬಳವನ್ನೂ ಹಿಂದಿನ ಮಟ್ಟಕ್ಕೇ ಇಳಿಸಲಾಗುವುದು ಆದರೆ, ಕೆಲಸಗಾರರು ಹಿಂದಿನದಕ್ಕಿಂತ ನಾಲ್ಕು ಪಾಲು ಹೆಚ್ಚು ಶ್ರಮಿಸಬೇಕಾಗುವುದು ಮತ್ತು ಮೈ ಮನಸ್ಸುಗಳನ್ನು ನಾಲ್ಕು ಪಾಲು ಹೆಚ್ಚು ಸವೆಯಿಸಬೇಕಾಗುವುದು

ಹೊಸದಾಗಿ ನೇಮಕಗೊಂಡ ಕೆಲಸಗಾರರನ್ನು ಕಾರ್ಖಾನೆಯ ಚಲನ ಚಿತ್ರ ಮಂದಿರಕ್ಕೆ ಒಯ್ಯುತ್ತಾರೆ ಅಲ್ಲಿ ಅವನು ಮಾಡಬೇಕಾದ ಕೆಲಸದ "ಮಾದರಿ" ವಿಧಾನದ ಸಿನೇಮಾ ತೋರಿಸುತ್ತಾರೆ. ಕೆಲಸಗಾರನು ಆ ಮಾದರಿಯನ್ನು ಅನುಸರಿಸುವಂತೆ ಹುರಿದುಂಬಿಸುತ್ತಾರೆ ಒಂದು ವಾರದ ನಂತರ ಅವನನ್ನು ಇನ್ನೊಮ್ಮೆ ಚಲನ ಚಿತ್ರ ಮಂದಿರಕ್ಕೆ ಕರೆದೊಯ್ಯುತ್ತಾರೆ ಅವನ ಕೆಲಸದ ವಿಧಾನದ ಛಾಯಾ ಚಿತ್ರಗಳನ್ನು ಮಾದರಿ ವಿಧಾನದ ಛಾಯಾ ಚಿತ್ರಗಳೊಂದಿಗೆ ಹೋಲಿಸಿ ತೋರಿಸುತ್ತಾರೆ

ಈ ಎಲ್ಲಾ ಸುಧಾರಣೆಗಳು ಕೆಲಸಗಾರರ ಹಿತದೃಷ್ಟಿಯ ವಿರುದ್ಧ ಬಳಕೆಗೆ ಬಂದಿವೆ. ಕಾರಣ, ಇವುಗಳು ಇನ್ನಷ್ಟು ಅವರ ಶೋಷಣೆಗೆ ಮತ್ತು ದುಸ್ಥಿತಿಗೆ ಕಾರಣವಾಗುವುವು. ಅಲ್ಲದೆ ದುಡಿಮೆಯ ದಕ್ಷ ಹಾಗೂ ವಿವೇಚನಾಯುಕ್ತ ವಿತರಣೆಯು ಪ್ರತಿ ಕಾರ್ಖಾನೆಗೆ ಮಾತ್ರ ಸೀಮಿತವಾಗಿದೆ.

ದುಡಿಮೆಯ ವಿತರಣೆಯು ಇಡೀ ಸಮಾಜದಲ್ಲಿ ಹೇಗಾಗುವುದು ಎಂಬುದೆ ನಿಜವಾಗಿ ಉದ್ಭವಿಸುವ ಪ್ರಶ್ನೆ. ಇಡೀ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಅಸಂಘಟಿತ ಹಾಗೂ ಅವ್ಯವಸ್ಥಿತ ಉತ್ಪಾದನೆಯಿಂದಾಗಿ ಎಷ್ಟೊಂದು ದುಡಿಮೆಯು ನಿರುಪಯೋಗವಾಗುತ್ತಿಲ್ಲ ! ಮಾರುಕಟ್ಟೆಯ ಅಗತ್ಯದ ಅರಿವಿಲ್ಲದಾಗ, ಕಚ್ಚಾ ವಸ್ತುಗಳು ನೂರಾರು ಕೊಳ್ಳುವವರ ಮತ್ತು ಮಧ್ಯವರ್ತಿಗಳ (middlman) ಹಸ್ತಾಂತರಗೊಂಡು ಕಾರ್ಖಾನೆಗಳಿಗೆ ತಲುಪುವಾಗ ಎಷ್ಟೊಂದು ಸಮಯ ಹಾಳಾಗುತ್ತಿಲ್ಲ ! ಅಲ್ಲದೆ ಸಿದ್ಧ ವಸ್ತುಗಳನ್ನು ಮಾರುಕಟ್ಟೆಯ ಅಗತ್ಯದ ಅರಿವಿಲ್ಲದೆ ಅಸಂಖ್ಯಾತ ಸಣ್ಣ ಮಧ್ಯವರ್ತಿಗಳ ಮೂಲಕ ವಿತರಣೆ ಮಾಡುವಾಗ ಮತ್ತು ಹಲವಾರು ಅನಗತ್ಯದ ಸಾಗಾಟ, ಕೊಂಡುಕೊಳ್ಳುವ ವಹಿವಾಟ, ಪ್ರಯಾಣ ಹಾಗೂ ಪರಿದಾಟಗಳಿಂದ ಎಷ್ಟೊಂದು ಸಮಯ ಮತ್ತು ದುಡಿಮೆ ವ್ಯರ್ಥವಾಗುತ್ತಿಲ್ಲ! ಈ ಹಂತಗಳಲ್ಲೂ ಎಷ್ಟೊಂದು ಸಿದ್ಧವಸ್ತುಗಳು ನಷ್ಟವಾಗುತ್ತಿಲ್ಲ!

ಅಧಿಕ ಲಾಭ ಗಿಟ್ಟಿಸಲು ಮತ್ತು ಕಾರ್ಮಿಕರನ್ನು ಹೆಚ್ಚು ಹೆಚ್ಚು ಶೋಷಿಸಲು ಬಂಡವಾಳವು ಅವರನ್ನು ಕಾರ್ಖಾನೆಯ ಒಳಗೆ ಮಾತ್ರ ಸಂಘಟಿಸುತ್ತದೆ ಮತ್ತು ವಿವೇಚನಾತ್ಮಕವಾಗಿ ಉಪಯೋಗಿಸುತ್ತದೆ. ಆದರೆ, ಸಾಮಾಜಿಕ ಉತ್ಪಾದನೆಯ ಸಮಗ್ರ ದೃಷ್ಟಿಯಲ್ಲಿ ಅವ್ಯವಸ್ಥೆ ಅರಾಜಕತೆ ಮುಂದುವರಿಯುತ್ತದೆ ಮತ್ತು ಹೆಚ್ಚುತ್ತದೆ. ಹೂಡಿಟ್ಟ ಸಂಪತ್ತಿಗೆ ಮಾರುಕಟ್ಟೆ ಸಿಕ್ಕದೆ ವಿಷಮ ಪರಿಸ್ಥಿತಿಗಳು ಉಂಟಾಗುತ್ತವೆ. ಮಿಲಿಯಗಟ್ಟಲೆ ಜನರು ಸಾಯುತ್ತಾರೆ. ಕಾರಣ, ಅವರು ಉದ್ಯೋಗ ಪಡೆಯಲು ಅಶಕ್ತರಾಗುತ್ತಾರೆ.

ಟೈಲರ್ ಪದ್ಧತಿ, ಅದರ ಮೊದಲ ಅನ್ವೇಶಕರೇ ತಿಳಿಯದ ಅಥವಾ ಇಚ್ಛಿಸದ ಪರಿಸ್ಥಿತಿಯನ್ನು ತಂದೊಡ್ಡುತ್ತಿದೆ. ಶ್ರಮಿಕ ವರ್ಗವೇ ಎಲ್ಲಾ ಸಾಮಾಜಿಕ ಉತ್ಪಾದನೆಯನ್ನು ವಶಪಡಿಸಿಕೊಳ್ಳಲು ಸಮಯ ಸಾಧಿಸುತ್ತಿದೆ. ಆಗ ಎಲ್ಲಾ ಸಾಮಾಜಿಕ ದುಡಿಮೆಯನ್ನು ಯೋಗ್ಯ ಹಾಗೂ ವಿವೇಚನಾತ್ಮಕವಾಗಿ ವಿತರಣೆ ಮಾಡಲು ಕಾರ್ಮಿಕರ ಸಮಿತಿಗಳು ನೇಮಿಸಲ್ಪಡುತ್ತವೆ. ಸಂಘಟಿತ ಕಾರ್ಮಿಕರಿಗೆ ತಮ್ಮ ದುಡಿಮೆಯ ಸಮಯದಲ್ಲಿ ಮುಕ್ಕಾಲು ಅಂಶದಷ್ಟು ಕಡಿಮೆ ಮಾಡಿಕೊಳ್ಳಲು ದೊಡ್ಡ ಪ್ರಮಾಣದ ಉತ್ಪಾದನೆ, ಯಂತ್ರೋಪಕರಣಗಳು, ರೈಲುಗಳು, ಟೆಲಿಫೋನ್‌ಗಳು ಮುಂತಾದವು ಸಾವಿರಾರು ಅವಕಾಶಗಳನ್ನು ಒದಗಿಸುವುವು ಇದರಿಂದಾಗಿ ಅವರ ಜೀವನ ಮಟ್ಟವು ಇಂದಿನದಕ್ಕಿಂತ ನಾಲ್ಕುಪಾಲು ಉತ್ತಮಗೊಳ್ಳುವುದು.

ಸಾಮಾಜಿಕ ದುಡಿಮೆಯು ಬಂಡವಾಳದ ದಾಸ್ಯದಿಂದ ಮುಕ್ತವಾದಾಗ ಕಾರ್ಮಿಕರ ಈ ಸಮಿತಿಗಳು ಅವರ ಸಂಘಗಳಿಂದ (unions) ಸಹಕರಿಸಲ್ಪಟ್ಟು, ಸಾಮಾಜಿಕ ದುಡಿಮೆಯನ್ನು ವಿವೇಚನಾತ್ಮಕವಾಗಿವಿತರಣೆಗೊಳಿಸುವ ವಿಧಾನಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುವುದು.

ದಕ್ಷಿಣ ಆಫ್ರಿಕದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು

ವಿಶ್ವಸಂಸ್ಥೆ ಅಂಕಿ ಅಂಶಗಳ ಪ್ರಕಾರ ದಕ್ಷಿಣ ಅಫ್ರಿಕದಲ್ಲಿ 1068 ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ವ್ಯವಹಾರಗಳನ್ನು ನಡೆಸುತ್ತಲಿವೆ. ಇವುಗಳಲ್ಲಿ 406 ಸಂಸ್ಥೆಗಳು ಅಮೇರಿಕ ದೇಶದವು, 364 ಬ್ರಿಟಿಷ್‌ನವು, 142 ಪಶ್ಚಿಮ ಜರ್ಮನಿಯವು, 32 ಸ್ವಿಟ್ಜರ್ಲೆಂಡ್‌ಗೆ ಸೇರಿದವು, 20 ಫ್ರಾನ್ಸ್‌ನವು, 18 ಸ್ವೀಡನ್ ದೇಶದ್ದು, 17 ಹಾಲೆಂಡ್ ದೇಶಕ್ಕೆ ಸೇರಿದವು.

ಈ ಸಂಸ್ಥೆಗಳಲ್ಲಿ 6,00,000 (ಆರು ಲಕ್ಷ) ಜನರು ದುಡಿಯುತ್ತಲಿದ್ದು ಇವರಲ್ಲಿ 4 00 000 ಜನರು ಅಫ್ರಿಕನರು ದಕ್ಷಿಣ ಅಫ್ರಿಕದಲ್ಲಿ 10.1 ಮಿಲಿಯ ದುಡಿಯುವ ಜನರಿದ್ದು ಅವರಲ್ಲಿ 8.1 ಮಿಲಿಯ ಅಫ್ರಿಕನ್ನರು.

ಮೇಲ್ಕಂಡ ಅಂಶಗಳು ಅಲ್ಪಸಂಖ್ಯಾತ ಬಿಳಿಯರ ಆಡಳಿತಕ್ಕೂ ಮತ್ತು ಅಂತರರಾಷ್ಟ್ರೀಯ ಬಂಡವಾಳ ಶಾಹಿಗಳಿಗೂ ಇರುವ ನಿಕಟಸಂಬಂಧವನ್ನು ಎತ್ತಿಹಿಡಿಯುತ್ತವೆ

ಜನತೆಯ ಒತ್ತಾಯದ ಮೇಲೆ ವರ್ಣಭೇದ ಪ್ರಿಟೋರಿಯ ಆಡಳಿತದ ವಿರುದ್ಧ ವಿಧಿಸಿರುವ ಆರ್ಥಿಕ ದಿಗ್ಬಂಧನವು ಬಂಡವಾಳಶಾಹಿ ದೇಶಗಳಿಗೆ ನೆಪ ಮಾತ್ರವೆಂದು ಸಾಬೀತು ಮಾಡುತ್ತದೆ.

ಪಶ್ಚಿಮ ಜರ್ಮನಿ ವಾರಪತ್ರಿಕೆ ಸ್ಪೆರಿನ್ ಪಶ್ಚಿಮ ಜರ್ಮನಿಯು ದಕ್ಷಿಣ ಅಫ್ರಿಕಕ್ಕೆ 550 ಕೋಟಿ ಮಾರ್ಕ್ಸ್ ಬೆಲೆಯ ಕೈಗಾರಿಕಾ ವಸ್ತುಗಳನ್ನು ರಫ್ತುಮಾಡಿ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದೆ ಜಪಾನ್ ದೇಶವು ಎರಡನೆ ಸ್ಥಾನದಲ್ಲಿದೆ.

ಅಖಿಲ ಭಾರತ ಕಿಸಾನ್‌ಸಭೆಯ ಸ್ವರ್ಣ ಮಹೋತ್ಸವ

1936 ರಲ್ಲಿ ಪಾಟ್ನಾದಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್ ಸಭೆಯ ಸ್ವರ್ಣ ಮಹೋತ್ಸವವು ಏಪ್ರಿಲ್ 26, 27 ಮತ್ತು 28 ರಂದು ಪಾಟ್ನಾದಲ್ಲಿ ವಿಜೃಂಭಣೆಯಿಂದ ನಡೆಯಲಿದೆ. ಈ ಕುರಿತು ಈಗಾಗಲೇ ಎಐಕೆಎಸ್ ಕಾರ್ಯಕ್ರಮ ಹಾಕಿ ರಾಷ್ಟ್ರದಾದ್ಯಂತ 80 ಲಕ್ಷ ಕಿಸಾನ್‌ಸಭಾ ಸದಸ್ಯರನ್ನು ನೊಂದಾಯಿಸಬೇಕೆಂದೂ ರಾಷ್ಟ್ರದಾದ್ಯಂತ ನಡೆದ ಪ್ರಮುಖ ರೈತ ಹೋರಾಟಗಳನ್ನು ವಿವರಿಸುವ ಹೊತ್ತಿಗೆಗಳನ್ನು ಹೊರತರಬೇಕೆಂದೂ ಆರಂಭ ಕಾಲದಿಂದಲೂ ಎಐಕೆಎಸ್ ಘಟಕಗಳಲ್ಲಿ ದುಡಿಯುತ್ತಾ ಬಂದ, ರೈತರ ಹೋರಾಟಗಳಲ್ಲಿ ಪ್ರಮುಖವಾಗಿ ಪಾತ್ರ ವಹಿಸಿದ ರೈತ ಕಾರ್ಯಕರ್ತರನ್ನು ಸನ್ಮಾನಿಸಬೇಕೆಂದೂ, ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಪ್ರಮುಖ ಭಾಗವಹಿಸಬೇಕಾದ ರೈತ ವಿಭಾಗಗಳನ್ನು ಎಚ್ಚರಿಸುವ ಪ್ರಚಾರ ಕಾರ್ಯ ನಡೆಸಬೇಕೆಂದೂ ತೀರ್ಮಾನಿಸಿ ಕೆಲಸ ಮಾಡುತ್ತಿದೆ.

ಈಗಾಗಲೇ ಕೇರಳದ ಕಣ್ಣಾನೂರಿನಲ್ಲಿ ಈ ಸಂಬಂಧದಲ್ಲಿ ಹಳೆಯ ರೈತ ಮುಖಂಡರನ್ನು ಸನ್ಮಾನಿಸಲು ಸಭೆಯು ನಡೆದಿದೆ. ಆದಿವಾಸಿಗಳು ನಡೆಸಿದ ಹೋರಾಟದ ಕುರಿತು ಹೊತ್ತಿಗೆ ತಯಾರಾಗುತ್ತಿದೆ. ಬಿಹಾರದಲ್ಲಿ 3000 ಗ್ರಾಮಗಳಲ್ಲಿ ರೈತ ಸಂಘದ ಸಮಿತಿಗಳನ್ನು ರಚಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸುವ ಯೋಜನಾಬದ್ಧ ಕೆಲಸ ಆರಂಭವಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘವು ಡಿಸೆಂಬರ್ 17 ರಂದು ಸಭೆ ನಡೆಸಿ "ರಾಜ್ಯದಲ್ಲಿ ಒಂದೂರೆಲಕ್ಷ ಸದಸ್ಯರನ್ನು ನೊಂದಾಯಿಸುವ ಗುರಿ ಸಾಧಿಸಬೇಕೆಂಬ ಕರೆ"ಯನ್ನು ಕೊಟ್ಟಿದೆ. ಎಲ್ಲಾ ಜಿಲ್ಲೆಗಳಿಗೆ ಕೋಟಾ ಹಾಕಿದೆ.

ಎಐಕೆಎಸ್ ಚರಿತ್ರೆ ಮತ್ತು ಕರ್ನಾಟಕದಲ್ಲಿ ರೈತರು ನಡೆದು ಬಂದ ಹಾದಿ ಕುರಿತು ಹೊತ್ತಿಗೆ ತರಬೇಕೆಂದು ನಿರ್ಧರಿಸಿ ಉಪ ಸಮಿತಿಗಳನ್ನು ರಚಿಸಿದೆ.

ರಾಜ್ಯದಲ್ಲಿ ಏಪ್ರಿಲ್ ತಿಂಗಳಲ್ಲಿ ರೈತರ ರಾಜ್ಯ ಸಮ್ಮೇಳನವನ್ನು ನಡೆಸುವುದೆಂದೂ, ಮಾರ್ಚಿಯೊಳಗೆ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ತಾಲೂಕು ಸಮ್ಮೇಳನವನ್ನು ನಡೆಸಬೇಕೆಂದೂ ತೀರ್ಮಾನಿಸಿದೆ.

ರಾಜ್ಯದಲ್ಲಿ ನಡೆಯುವ ರೈತ ಸಮ್ಮೇಳನದ ವೇಳೆ ಕೃಷಿ ಕೂಲಿಗಾರರ ಸಂಘಟನಾ ಸಮಿತಿ ರಚಿಸಬೇಕೆಂದೂ ಕರೆ ಕೊಟ್ಟಿದೆ.

ರಾಜ್ಯದಲ್ಲಿ ಸತತವಾಗಿ 3 ವರ್ಷಗಳಿಂದ ಅನುಭವಿಸುತ್ತಾ ಬರುತ್ತಿರುವ "ಬರಗಾಲ"ದ ಕುರಿತು ದೀರ್ಘಕಾಲ ಚರ್ಚೆ ಮಾಡಿ "ಈ ವಿಷಯದಲ್ಲಿ ಕೇಂದ್ರ ಸರಕಾರವು, ರಾಜ್ಯ ಸರಕಾರವು ಸಾಕಷ್ಟು ಕಾಳಜಿ" ವಹಿಸಲಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

ಕೇಂದ್ರ ಸರಕಾರವು ಕೂಡಲೇ ಆಹಾರ ಧಾನ್ಯಗಳನ್ನು, ಸಹಾಯ ಧನವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ವಿಷಯದಲ್ಲಿ ಒತ್ತಾಯ ತರುವ ಸಲುವಾಗಿಯೂ, ರಾಜ್ಯದಲ್ಲಿ ಎಲ್ಲಾ ಮಟ್ಟಗಳಲ್ಲಿ ರೈತರ ಪ್ರತಿನಿಧಿಗಳನ್ನೊಳಗೊಂಡ ಉಸ್ತುವಾರಿ ಸಮಿತಿಗಳನ್ನು ರಚಿಸುವ ಸಲುವಾಗಿಯೂ ಜನವರಿ 21-31 ರವರೆಗೆ ತೀವ್ರ ಪ್ರಕ್ಷೋಭೆ ಕಾರ್ಯಕ್ರಮ ಹಾಕಬೇಕೆಂದೂ ಸಮಿತಿಯು ತೀರ್ಮಾನಿಸಿದೆ.

ಸಾಧ್ಯವಿದ್ದಷ್ಟು ವಿಶಾಲ ಪ್ರಮಾಣದಲ್ಲಿ ಧಾನ್ಯ, ಮೇವು, ಹಣ ಇತ್ಯಾದಿ ಸಂಗ್ರಹ ಮಾಡಿ "ಪ್ರಾಂತ ರೈತ ಸಂಘದ ಘಟಕಗಳ ಮೂಲಕ ಬರಗಾಲ ಪ್ರದೇಶಗಳಲ್ಲಿ ಹಂಚುವ ಕಾರ್ಯಕ್ರಮ ಹಾಕಬೇಕೆಂದೂ" ತೀರ್ಮಾನಿಸಿದೆ.

ರಾಜ್ಯದ ಎಲ್ಲಾ ರೈತ ಸಂಘದ ಘಟಕಗಳು ಈ ಕುರಿತು ಕೂಡಲೇ ಕಾರ್ಯ ಪ್ರವೃತ್ತರಾಗಬೇಕೆಂದು ಪ್ರಾಂತ ರೈತ ಸಂಘವು ಕರೆಕೊಡುತ್ತದೆ.

ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆ

ಅಖಿಲ ಭಾರತ ಕಿಸಾನ್ ಸಭಾ ಜನ್ಮ ತಾಳಿ 1986ಕ್ಕೆ 50ವರ್ಷವಾಗುತ್ತದೆ. ಭಾರತದಾದ್ಯಂತ 1986ನ್ನು ಕಿಸಾನ್ ಸಭಾದ ಸ್ವರ್ಣ ಮಹೋತ್ಸವ ವರ್ಷವನ್ನಾಗಿ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಅದರ ಪ್ರಾತ್ಯ ಸಂಘನೆಯಾದ ಕರ್ನಾಟಕ ಪ್ರಾಂತ ರೈತ ಸಂಘವು ಉತ್ಸವ ಆಚರಿಸುವುದಲ್ಲದೆ, ಕರ್ನಾಟಕ ಪ್ರಾಂತ್ಯದ ರೈತ ಸಂಘದ ಹೋರಾಟದ ಮತ್ತು ಮುನ್ನಡೆದು ಬಂದ ದಾರಿಯ ವಿಷಯಗಳನ್ನೊಳಗೊಂಡ ಚರಿತ್ರೆಯೊಂದನ್ನು ತರಲು ತೀರ್ಮಾನಿಸಲಾಗಿದೆ. ತಾ. 17.12.85ರಂದು ಕೇಂದ್ರ ಕಾರ್ಯಕಾರಿ ಸಮಿತಿ ಈ ಬಗ್ಗೆ ಸಮಿತಿಯೊಂದನ್ನು ರಚಿಸಿದೆ. ಕರ್ನಾಟಕದ ರೈತರ ಹೋರಾಟದ ಚರಿತ್ರೆಯೊಂದು ತಯಾರಾಗಿ ಅದು ಮುಂದಿನ ಕಾರ್ಯಕ್ರಮಗಳಿಗೆ ದಾರಿದೀಪವಾಗ ಬೇಕಾಗಿದೆ.

ಮಾಹಿತಿಗಳನ್ನು ಕಳುಹಿಸುವವರು 1947ಕ್ಕೆ ಮೊದಲು ಸೇರಿದಂತೆ 1985ರ ವರೆಗಿನ ಹೋರಾಟಗಳ ಸಂಕ್ಷಿಪ್ತ ವರದಿಯನ್ನು ಕಳುಹಿಸಿಕೊಡಬೇಕು. ಇದರಲ್ಲಿ ವ್ಯಕ್ತಿಗಳ ತ್ಯಾಗ ಬಲಿದಾನ ಮತ್ತು ಹೋರಾಟಗಳು ಯಾವ ಯಾವ ಸಮಸ್ಯೆಗಳಿಗಾಗಿ ನಡೆದವು ಎಂಬ ಅಂಶ ಇರಬೇಕು. ಪ್ರಾಂತ್ಯ ರೈತ ಸಂಘದ ಸಮ್ಮೇಳನ ಸಭೆಗಳು ಹೋರಾಟಗಳ ಕಾಲದಲ್ಲಿ ಸರ್ಕಾರದಿಂದ ನಡೆದ ದಬ್ಬಾಳಿಕೆ ಜನರು ನಡೆಸಿದ ವಿರೋಚಿತ ಹೋರಾಟಗಳು ರಂಜನೀಯ ಘಟನೆಗಳು ಸಂಘದ ಪಾತ್ರ, ಸಮ್ಮೇಳನದಲ್ಲಿ ಚರ್ಚಿಸಿದ ಆಯಾ ಕಾಲದ ಸಮಸ್ಯೆಗಳು ಮುಂತಾದ ವಿವರಗಳಿರಬೇಕು. ಮುಖ್ಯವಾಗಿ ಕಾರ್ಯಕಾರಿ ಸಮಿತಿ ಸದಸ್ಯರು, ನಮ್ಮ ಜಿಲ್ಲಾ ಸಮಿತಿಗಳು, ತಾಲ್ಲೂಕು ಸಮಿತಿಗಳು ಕೂಡಲೇ ಮಾಹಿತಿಗಳನ್ನು ಸಂಗ್ರಹಿಸಿ ಬೇಗನೆ ಕಳುಹಿಸಿಕೊಡಬೇಕು. ಹೋರಾಟಗಳು ಯಾವುದೇ ರಾಜಕೀಯ ಪಕ್ಷ ಅಥವಾ ಇತರರಿಂದ ಪ್ರಾಮಾಣಿಕವಾಗಿ ದುಡಿಯುವ ವರ್ಗದ ರೈತರ ಪರವಾಗಿದ್ದಲ್ಲಿ ಅದನ್ನು ಸಂಗ್ರಹಿಸಿ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬಹುದು.

ಸಿ. ರಾಮಭದ್ರಯ್ಯ,
ಗರುಡಿ ಎದುರು, ತಾಲ್ಲೂಕು ಕಛೇರಿ ರಸ್ತೆ,
ದೊಡ್ಡಬಳ್ಳಾಪುರ–561203

ಸಿಪಿಐ (ಎ) ಬೆಂಗಳೂರು ಜಿಲ್ಲಾ ಸಮಿತಿಯಿಂದ ಬರಗಾಲ ಪರಿಹಾರ ನಿಧಿ ಸಂಗ್ರಹಣೆ

ಜ. 21ರಂದು ವಿಧಾನ ಸೌಧದೆದುರು ಧರಣಿ, ಮೆರವಣಿಗೆ

100 ಕೋಟಿ ರೂ.ಗಳ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ

ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿದ್ದು 19 ಜಿಲ್ಲೆಗಳ ಪೈಕಿ 17 ಜಿಲ್ಲೆಗಳಲ್ಲಿ ತೀವ್ರ ಪರಿಸ್ಥಿತಿಯಿರುವುದೆಂದು ಕೇಂದ್ರದ ಆಯೋಗವೆ ವರದಿ ಸಲ್ಲಿಸಿದೆ. ರಾಜ್ಯ ಸರ್ಕಾರವು 210 ಕೋಟಿ ರೂಗಳ ಪರಿಹಾರ ಧನ ಒದಗಿಸಲು ಕೋರಿದ್ದರೂ ಕೇಂದ್ರ ಸರ್ಕಾರವು ಕೇವಲ 38 ಕೋಟಿ ರೂಗಳನ್ನು ಮಾತ್ರ ಮಂಜೂರು ಮಾಡಿದೆ. ಸಿ ಪಿ ಐ (ಎಂ) ನವೆಂಬರ್ 22 ಕರ್ನಾಟಕ ಬಂದ್ ಆಚರಣೆಯ ಸಂದರ್ಭದಲ್ಲಿ ಕೇಂದ್ರದ ಈ ಮಲತಾಯಿ ಧೋರಣೆಯನ್ನು ಎದುರಿಸಲು ಎಚ್ಚರಿಸಿದ್ದರೂ ಜನತಾ ಸರ್ಕಾರವು ಸೂಕ್ತ ಒತ್ತಾಯ ಹೇರಲು ಪ್ರಯತ್ನಿಸಿಲ್ಲ. ಅನೇಕ ಜಿಲ್ಲೆಗಳಲ್ಲಿ ದನಕರುಗಳು ಮೇವು ನೀರಿಲ್ಲದೆ ಸಾಯುತ್ತಿದ್ದು ಲಕ್ಷಾಂತರ ಜನರು ವಲಸೆ ಹೊರಟಿದ್ದಾರೆ. ನಮ್ಮ ದೇಶದಲ್ಲಿನ ಬಂಡವಾಳಶಾಹಿ ಆರ್ಥಿಕ ಪದ್ಧತಿಯ ಪರಿಣಾಮವಾಗಿ ಕ್ಷಾಮ, ಪ್ರವಾಹ ಇತ್ಯಾದಿ ಪ್ರಕೃತಿ ವಿಕೋಪಗಳಿಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯದೆ ಬಡಜನರು ಬಲಿಯಾಗುತ್ತಿದ್ದಾರೆ. ಇಂತಹ ಗಂಭೀರ ಸನ್ನಿವೇಶವನ್ನು ಎದುರಿಸಲು ದುಡಿಯುವ ಜನಶಕ್ತಿ ಮೀರಿ ಶ್ರಮಿಸಬೇಕಾಗಿದೆ

ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೂಡಲೇ 100 ಕೋಟಿ ರೂ. ಗಳನ್ನು ನೀಡಬೇಕೆಂದು ಸಿಪಿಐ [ಎಂ] ಬೆಂಗಳೂರು ಜಿಲ್ಲಾ ಸಮಿತಿ ಒತ್ತಾಯಿಸಿದೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು 1986 ಜನವರಿ 14ರಿಂದ 21ರ ವರೆಗೆ ಬರಪರಿಹಾರ ನಿಧಿ ಸಂಗ್ರಹ ಸಪ್ತಾಹವನ್ನು ಆಚರಿಸಲು ಕರೆ ನೀಡಿದೆ ಬರಗಾಲ ಪರಿಹಾರ ಕಾರ್ಯವನ್ನು ತ್ವರಿತಗೊಳಿಸುವಂತೆ ಹಾಗೂ ಪರಿಹಾರ ಕಾರ್ಯದಲ್ಲಿ ದುರುಪಯೋಗವನ್ನು ತಡೆಯಲು ಸರ್ವ ಪಕ್ಷಗಳ ನಾಗರೀಕ ಉಸ್ತುವಾರಿ ಸಮಿತಿಗಳನ್ನು ರಚಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಜನವರಿ 21 ರಂದು ಸಿಲ್ವರ್ ಜ್ಯೂಬಿಲಿ ಪಾರ್ಕ್ ನಿಂದ ಮೆರವಣಿಗೆ ಹೊರಟು ವಿಧಾನ ಸೌಧದ ಮುಂದೆ ಸಾಮೂಹಿಕ ಧರಣಿ ಹೂಡಲು ನಿರ್ಧರಿಲಾಗಿದೆ.

ಬೆಂಗಳೂರು ನಗರದ ಕಾರ್ಮಿಕ ವರ್ಗ, ನೌಕರರು, ರೈತರು ಹಾಗೂ ಸಮಸ್ತ ಜನತೆ ಧನ, ಧಾನ್ಯ ಸಹಾಯ ನೀಡಿ ಸಂತ್ರಸ್ಥರಿಗೆ ಪರಿಹಾರ ನೀಡಬೇಕೆಂದು ಜಿಲ್ಲಾ ಸಮಿತಿ ಕರೆ ನೀಡಿದೆ.

ವಿದ್ಯಾರ್ಥಿಗಳ ಮೇಲೆ ಪೋಲೀಸ್ ದೌರ್ಜನ್ಯ : ಹರಪನಹಳ್ಳಿ ಎಸ್. ಐ. ಅಮಾನತಿಗೆ ಒತ್ತಾಯ

ದಿನಾಂಕ 9-12-1985 ರಂದು ಪಿ. ಯು. ಸಿ. ಇಂಟರ್‌ಶಿಪ್ ಅವಧಿಯನ್ನು ಏರಿಸಿರುವುದನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ವಿದ್ಯಾರ್ಥಿಗಳು ಶಾಂತ ರೀತಿಯಲ್ಲಿ ತಹಶೀಲ್ದಾರ್ ಅವರ ಕಚೇರಿಗೆ ತೆರಳಿ ಮನವಿ ಪತ್ರ ಅರ್ಪಿಸಲು ಹೋದಾಗ ಅಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಗಿರಿಜಾಪತಿ ಯವರು ವಿನಾಕಾರಣ ವಿದ್ಯಾರ್ಥಿ ನಾಯಕರುಗಳನ್ನೊಳಗೊಂಡಂತೆ ಹಲವಾರು ವಿದ್ಯಾರ್ಥಿಗಳನ್ನು ಬಂಧಿಸಿ ಠಾಣೆಗೆ ಎಳೆದೊಯ್ದರು, ಅವಾಚ್ಯವಾಗಿ ಬೈದು ಕೆಲವು ವಿದ್ಯಾರ್ಥಿಗಳನ್ನು ಬೆದರಿಸಿ ಕ್ಷಮಾಪಣೆ ಪತ್ರವನ್ನು ಬರೆಸಿಕೊಂಡಿದ್ದಾರೆ.

ಬಂಧಿತ ನಾಯಕರುಗಳಾದ ಎಸ್. ಎಫ್. ಐ ಯ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯರುಗಳಾದ ಕಾಂ ಚನ್ನಬಸಪ್ಪ, ಕಾಂ. ಕೃಷ್ಣಾಜಿ ಕಲಾಲ್ ಅವರುಗಳನ್ನು ಲಾಕಪ್‌ಗೆ ತಳ್ಳಿ ಅವರುಗಳ ಬಟ್ಟೆ ಕಳಚಿ ಸ್ವವಿಳಾಸ ಬರೆದ ಕಪ್ಪು ಹಲಗೆಯನ್ನು ಕೈಯಲ್ಲಿ ಹಿಡಿಸಿ ಫೋಟೋ ತೆಗೆದಿದ್ದಾರೆ ತೀವ್ರತರ ಮಾನಸಿಕ ಹಿಂಸೆ, ಬೆದರಿಕೆಗಳನ್ನು ಹಾಕಿದ್ದಾರೆ ಬೆದರಿಸಿ ಖಾಲೀ ಫಾರಂಗಳ ಮೇಲೆ ಸಹಿಗಳನ್ನು ಪಡೆದಿದ್ದಾರೆ.

ಕಾನೂನಿಗೆ ವಿರುದ್ಧವಾಗಿ ಬಂಧಿತರನ್ನು 24 ತಾಸುಗಳಿಗೂ ಹೆಚ್ಚುಕಾಲ ಲಾಕಪ್ ನಲ್ಲಿ ಕೂಡಿಹಾಕಿದ್ದಾರೆ ನ್ಯಾಯಾಲಯಕ್ಕೆ ಹಾಜರುಪಡಿಸಲಿಲ್ಲ

ಈ ಪ್ರಕರಣದ ಬಗ್ಗೆ ಕೂಡಲೇ ತನಿಖೆ ನಡೆಸಿ ಸದರಿ ಎಸ್.ಐ ಯವರನ್ನು ಸಸ್ಪೆಂಡ್ ಮಾಡಿ ಸೂಕ್ತಕ್ರಮ ಜರುಗಿಸಬೇಕೆಂದು ಹಾಗೂ ಬಂಧನದ ಕಾಲದಲ್ಲಿ ಬೆದರಿಸಿ ತೆಗೆದುಕೊಂಡ ಫೋಟೋ, ಸಹಿಯಾದ ಫಾರಂಗಳನ್ನು ವಾಪಾಸು ಮಾಡಬೇಕು. ಹರಪನಹಳ್ಳಿಯಲ್ಲಿ ಹೆಚ್ಚುತ್ತಿರುವ ಪೋಲೀಸ್ ದೌರ್ಜನ್ಯವನ್ನು ನಿಲ್ಲಿಸುವಂತೆ ಕೋರಿ ಈಗಾಗಲೇ ಮುಖ್ಯ ಮಂತ್ರಿಗಳಿಗೂ ಬಳ್ಳಾರಿ ಎಸ್ಪಿ ಯವರಿಗೂ ಮತ್ತು ಮೇಲಾಧಿಕಾರಿಗಳಿಗೂ ಭೇಟಿಯಾಗಿ ಮನವಿ ಸಲ್ಲಿಸಲಾಗಿದೆ.

ಈ ಪ್ರಕರಣವನ್ನು ವಿರೋಧಿಸಿ ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ಶಾಖೆಗಳೂ ಪ್ರತಿಭಟಿಸುವಂತೆ ಜನವರಿ 5 ರಂದು ಸ್ಟೂಡೆಂಟ್ಸ್ ಫೆಡರೇಷನ್ ರಾಜ್ಯ ಸಮಿತಿಯು ಕರೆನೀಡಿದೆ.

'ಶಿಕ್ಷಣದ ಸವಾಲು' — ಎಸ್. ಎಫ್. ಐ. ಪ್ರತ್ಯುತ್ತರ

ಅನಕ್ಷರತೆ ಮತ್ತು ನಿರುದ್ಯೋಗವನ್ನು ಹೆಚ್ಚಿಸುವ ವ್ಯೂಹ

ಸರ್ಕಾರದ ನೀತಿ ನಿರೂಪಣೆಯಾದ ಶಿಕ್ಷಣದ ಸವಾಲಿನಲ್ಲಿ "ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ"ದ ಪ್ರಾಮುಖ್ಯತೆಯತ್ತ ಗಣನೀಯವಾಗಿ ಗಮನ ಹರಿಸಲಾಗಿದೆ. ನಮ್ಮ ಸಂವಿಧಾನದ ರಾಜ್ಯ ನೀತಿಯ ನಿರ್ದೇಶನಗಳ 45ನೇ ವಿಧಿಯ ಪ್ರಕಾರ 1960 ರ ವೇಳೆಗೆ 6 ರಿಂದ 14 ವರ್ಷ ವಯೋಮಿತಿಯ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತರಿಪಡಿಸುವ ಭರವಸೆಯನ್ನು ಈಡೇರಿಸಲಾಗಿಲ್ಲವೆಂದು ದಾಖಲೆಯು ಅಲ್ಲಲ್ಲಿ ದುಃಖ ವ್ಯಕ್ತಪಡಿಸುತ್ತದೆ. ಶೇಖಡ 1.5 ರಷ್ಟು ಜನಸಂಖ್ಯಾ ಬೆಳವಣಿಗೆಯ ಅಂದಾಜಿನೊಂದಿಗೆ ಸದ್ಯದ ಸ್ಥಿತಿಯೇ ಮುಂದುವರಿದರೆ 1990 ರ ವೇಳೆಗೆ 464 ಲಕ್ಷ ಮಕ್ಕಳು ಶಾಲಾ ಶಿಕ್ಷಣ ಪದ್ಧತಿಯಿಂದ ಹೊರಗುಳಿಯುತ್ತಾರೆ. (ಪ್ಯಾರಾ - 4.61). ಜನಸಂಖ್ಯಾ ಬೆಳವಣಿಗೆಯ ನಿಜವಾದ ದರವು ಶೇ 2.5 ಕ್ಕೆ ಸಮೀಪವಾಗಿದ್ದು 1980 ರ ದಶಕದಲ್ಲೂ ಇದೇ ಗತಿಯಲ್ಲಿ ಮುಂದುವರಿಯಲಿದ್ದು 1990 ರ ವೇಳೆಗೆ ವಾಸ್ತವವಾಗಿ ಸುಮಾರು 800 ಲಕ್ಷದಷ್ಟು ಮಕ್ಕಳು ಶಾಲಾ ಶಿಕ್ಷಣದಿಂದ ಹೊರಗುಳಿಯುತ್ತಾರೆ.

ಶಿಕ್ಷಣಕ್ಕಾಗಿ ಮುಂಗಡ ಪತ್ರದಲ್ಲಿ ಗೊತ್ತುಪಡಿಸುವ ಮೊತ್ತವನ್ನು ಸಾಕಷ್ಟು ಹೆಚ್ಚಿಸಬೇಕೆಂದು ದಾಖಲೆಯಲ್ಲಿ ಮಂಡಿಸಲಾಗಿದ್ದರೂ ಇದೇ ಸಂದರ್ಭದಲ್ಲಿ "ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವ ನೀತಿ ನಿರೂಪಣೆಯನ್ನು ಹಣಕಾಸು ನಿರ್ಣಯಗಳೊಂದಿಗೆ ಸರಿ ಹೊಂದಿಸುವುದು ಅವಶ್ಯಕ" (ಪ್ಯಾರಾ 4.64) ಎಂಬ ಸರ್ವೇ ಸಾಮಾನ್ಯವಾದ ಹೇಳಿಕೆಯನ್ನು ಬಿಟ್ಟರೆ ಹಣದ ವಿಶ್ಲೇಷಣೆಯ ಆಧಾರದಲ್ಲಿ ಯಾವುದೇ ಶಿಫಾರಸ್ಸುಗಳನ್ನು ಮಾಡುವಲ್ಲಿ ದಾಖಲೆಯು ವಿಫಲವಾಗಿದೆ.

ಶಿಕ್ಷಣವನ್ನು ಕಡಿಮೆ ಆದ್ಯತೆಯ ವಿಷಯವನ್ನಾಗಿ ಪರಿಗಣಿಸುವ ಸರ್ಕಾರದ ದೃಷ್ಟಿಕೋನವೇ ಈ ಅನಿಷ್ಟ ನಿಲುವುಗಳ ಜೋಡಣೆಯಾಗಿದೆ. ಏಳನೇ ಪಂಚವಾರ್ಷಿಕ ಯೋಜನೆಯನ್ನು ಅಂತಿಮಗೊಳಿಸುವ ಸಂದರ್ಭದಲ್ಲೇ ಈ ದಾಖಲೆಯನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಿರುವುದು ತಾಳೆಯಾಗಿದೆ. ಪ್ರಧಾನ ಮಂತ್ರಿಯವರು ಶಿಕ್ಷಣದ ಕುರಿತು ವ್ಯಕ್ತಪಡಿಸಿರುವ ಕಾಳಜಿಯು ಇದರಲ್ಲಿ ಪ್ರತಿಬಿಂಬಿಸಬಹುದೆಂದು ನಾವು ನಂಬಿದ್ದೆವು. ಇದಕ್ಕೆ ವ್ಯತಿರಿಕ್ತವಾಗಿ ಏಳನೇ ಯೋಜನೆಯು ಸಾಮಾನ್ಯ ಶಿಕ್ಷಣಕ್ಕೆ ಕೇವಲ 4775.3 ಕೋಟಿ ರೂಗಳನ್ನು ಅಂದರೆ ಯೋಜನಾ ವೆಚ್ಚದ ಶೇ. 3 ಕ್ಕಿಂತ ಕಡಿಮೆ ಮೊತ್ತವನ್ನು ಗೊತ್ತುಪಡಿಸಿದೆ. 1990-91 ರ ಸಾಲಿಗೆ ಕೊನೆಗೊಳ್ಳುವ ಐದು ವರ್ಷಗಳ ಅವಧಿಗೆ ಪ್ರಾಥಮಿಕ ಶಿಕ್ಷಣವು ಪಡೆಯುವ ಹಣದ ಮೊತ್ತ ಕೇವಲ 1830.45 ಕೋಟಿ ರೂಗಳಾಗಿದೆ. 1990-91 ನೇ ಸಾಲಿಗೆ ಬಹಳ ನಿರ್ಬಂಧಿತ ಊಹೆಗಳ ಆಧಾರದಲ್ಲಿ (ಶೇ 1.5 ಜನಸಂಖ್ಯಾ ಬೆಳವಣಿಗೆ, ಹಣದುಬ್ಬರ, ಶಿಕ್ಷಣ ವೆಚ್ಚಗಳ ಬೆಲೆಗಳಲ್ಲಿನ ಏರಿಕೆಯಿಲ್ಲ) ಕನಿಷ್ಠ 3200 ಕೋಟಿ ರೂಗಳು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿ ಸಾಧನೆಗೆ ಅಗತ್ಯವೆಂದು ದಾಖಲೆಯು ತೋರಿಸಿದೆ. ಹಣದುಬ್ಬರವನ್ನು ಪರಿಗಣನೆಗೆ ತೆಗೆದುಕೊಂಡರೆ ದಾಖಲೆಯು ಇಡೀ ಅವಧಿಗೆ ಗೊತ್ತುಪಡಿಸಿರುವ ಮೊತ್ತವು ಒಂದು ವರ್ಷಕ್ಕೆ ಶಿಫಾರಸ್ಸು ಮಾಡಿರುವ ಮೊತ್ತದ ಅರ್ಧದಷ್ಟು ಮಾತ್ರವಾಗಿದೆ. ಮೇಲಿನ ಅಂಕಿಅಂಶಗಳು ಎಲ್ಲ ಯೋಜನೆಗಳು ಮತ್ತು ಕಾರ್ಯಕ್ರಮಗಳಂತೆ ರಾಜಕೀಯ ರೂಪಾಲಂಕಾರ ಶೈಲಿಯ ಮೆರುಗಿನಲ್ಲಿ ವಾಸ್ತವವಾಗಿ ಸರ್ಕಾರವು ಸಂವಿಧಾನದ ನಿರ್ದೇಶನವನ್ನು ಪೂರ್ಣಗೊಳಿಸಬೇಕಾದ ತನ್ನ ಜವಾಬ್ದಾರಿಯನ್ನು ತಳ್ಳಿ ಹಾಕುತ್ತಿರುವುದನ್ನು ಸ್ಪಷ್ಟಪಡಿಸುತ್ತವೆ. ಈ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಿ ಶಿಕ್ಷಣಕ್ಕಾಗಿ ಶೇ 10 ರಷ್ಟು ಮೊತ್ತವನ್ನು ಗೊತ್ತುಪಡಿಸುವಂತೆ ಒತ್ತಾಯಿಸುವ ಹೋರಾಟದಲ್ಲಿ ವಿದ್ಯಾರ್ಥಿ ಸಮುದಾಯವನ್ನು ಅಣಿ ನೆರೆಸಲು ಎಸ್ ಎಫ್.ಐ. ದೃಢ ಸಂಕಲ್ಪ ಹೊಂದಿದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣ

ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಾಗೂ ಸಾರ್ವತ್ರಿಕ ಶಿಕ್ಷಣವು ಸಮಾನಾರ್ಥಕವೆಂದು ದಾಖಲೆಯು ಪರಿಗಣಿಸುತ್ತದೆ. ಇದು ತಪ್ಪಾಗಿರುವುದು ಮಾತ್ರವಲ್ಲದೆ ನಮ್ಮ ಅಭಿಪ್ರಾಯದಲ್ಲಿ ದುರುದ್ದೇಶಪೂರಿತವಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣವೆಂದರೆ 6 ರಿಂದ 14 ವರ್ಷ ವಯೋಮಿತಿಯ ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡುವುದು, ಅಂದರೆ ಉಚಿತ ಉಪಾಹಾರ, ಸಮವಸ್ತ್ರ, ಪಠ್ಯ ಪುಸ್ತಕ, ಸ್ಟೇಷನರಿ, ಇತ್ಯಾದಿ ಎಲ್ಲಾ ಪೂರಕ ಕಾರ್ಯಕ್ರಮಗಳಿಗೆ ಹಣ ಒದಗಿಸುವ ಮೂಲಕ ಸರ್ಕಾರವು ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದಾಗಿದೆ ಸಾರ್ವತ್ರಿಕ ಶಿಕ್ಷಣವೆಂದರೆ ಮಕ್ಕಳನ್ನು ಶಾಲೆಗಳಲ್ಲಿ ಕೇವಲ ನೋಂದಾಯಿಸುವುದು ಮಾತ್ರವಾಗುತ್ತದೆ. ಇವೆರಡೂ ಸಮಾನಾರ್ಥಕವೆಂದು ಪರಿಗಣಿಸುವುದರ ಮೂಲಕ ಸರ್ಕಾರವು ತಾನು ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದನ್ನು ಬಚ್ಚಿಡುವ ಪ್ರಯತ್ನವಾಗಿದೆ. ಅದರಲ್ಲೂ ಮಾಧ್ಯಮಿಕ ಹಂತದಲ್ಲಿ ಶೇಕಡ 77.1 ಹಾಗೂ ಪ್ರಾಥಮಿಕ ಹಂತದಲ್ಲಿ ಶೇ 63.1 ರಷ್ಟು ಮಕ್ಕಳು ಶಿಕ್ಷಣವನ್ನು ತೊರೆಯುವರೆಂದು ದಾಖಲೆ ಪತ್ರವೇ ಹೇಳುತ್ತಿರುವುದು ಗಮನಾರ್ಹವಾಗಿದೆ.

ಇದಕ್ಕೆ ಸಂಬಂಧಿಸಿದಂತೆ 1966ರಲ್ಲಿ "ಕೊಠಾರಿ ಆಯೋಗವು 1985-86 ನೇ ಸಾಲಿಗೆ ಶಿಕ್ಷಣದ ಮೇಲೆ ಕನಿಷ್ಠ ತಲಾ 54 ರೂಗಳನ್ನು ವೆಚ್ಚ ಮಾಡಬೇಕೆಂದು ಸಂಕೋಚದಿಂದ ಪ್ರತಿಪಾದಿಸಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. 1966 ರ ಬೆಲೆ ಸೂಚ್ಯಂಕದ ಪ್ರಕಾರ 1985-86 ನೇ ಸಾಲಿಗೆ ಮುಂಗಡ ಪತ್ರದಲ್ಲಿ ಗೊತ್ತುಪಡಿಸಿರುವ ಶಿಕ್ಷಣ ವೆಚ್ಚವು ಕೇವಲ ತಲಾ 3 ರೂ 10 ಪೈಗಳಾಗುತ್ತದೆ. ಸರ್ಕಾರವು ಶಿಕ್ಷಣಕ್ಕೆ ನೀಡುತ್ತಿರುವ ಆದ್ಯತೆಯು ಈ ಮಟ್ಟದಲ್ಲಿದೆ.

ಆದ್ದರಿಂದ ಸಾರ್ವತ್ರಿಕ ಶಿಕ್ಷಣದ ಗುರಿ ಸಾಧನೆಗೆ ಅನೌಪಚಾರಿಕ ಶಿಕ್ಷಣದ ಮೇಲೆ ಅತಿಯಾಗಿ ಅವಲಂಬಿಸಿರುವುದು ಆಕಸ್ಮಿಕವಾಗಿರದೆ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಸರ್ಕಾರದ ಬದ್ಧತೆಯ ಪೊಳ್ಳುತನದ ತಾರ್ಕಿಕ ಪ್ರತೀಕವಾಗಿದೆ ಅನೌಪಚಾರಿಕ ಶಿಕ್ಷಣ ಕ್ರಮದ ಮೇಲೆ ಸಂಪೂರ್ಣವಾಗಿ ಅವಲಂಬಿಸಿರುವುದರ ಬಗ್ಗೆ ಜಗತ್ತಿನ ಶಿಕ್ಷಣ ಶಾಸ್ತ್ರಜ್ಞರಲ್ಲಿ ಸದಭಿಪ್ರಾಯವಿಲ್ಲ. ಅನೌಪಚಾರಿಕ ಶಿಕ್ಷಣವು ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಪೂರಕವಾಗಬಲ್ಲದೇ ವಿನಃ ಔಪಚಾರಿಕ ಪ್ರಾಥಮಿಕ ಶಿಕ್ಷಣದ ಸ್ಥಾನವನ್ನು ಅಲಂಕರಿಸಬಾರದು ಆದ್ದರಿಂದ ಪ್ರಾಥಮಿಕ ಹಂತದಲ್ಲಿ ಅನೌಪಚಾರಿಕ ಶಿಕ್ಷಣದ ಬಗ್ಗೆ ದಾಖಲೆ ಪತ್ರದಲ್ಲಿ ಅನಗತ್ಯ ಒತ್ತನ್ನು ನೀಡಿರುವುದು ಔಪಚಾರಿಕ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ ಸರ್ಕಾರಕ್ಕಿರುವ ನಿರಾಸಕ್ತಿಯನ್ನು ಬಯಲಿಗೆಳೆಯುತ್ತದೆ. ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕುಟಿಲ ತಂತ್ರವನ್ನು ಎಸ್.ಎಫ್.ಐ. ಮೌನ ಪ್ರೇಕ್ಷಕನಂತೆ ವೀಕ್ಷಿಸಲಾಗುವುದಿಲ್ಲ.

ಔಪಚಾರಿಕ ಶಿಕ್ಷಣಕ್ಕೆ ಬದಲಾಗಿ ಅನೌಪಚಾರಿಕ ಶಿಕ್ಷಣವನ್ನು ಅಳವಡಿಸುವುದರಿಂದ ವೆಚ್ಚವನ್ನು ಕಡಿಮೆಗೊಳಿಸಿದಂತಾಗುವುದು ದಾಖಲೆಯ ಪತ್ರದ ಅಧ್ಯಾಯ 2 ಪ್ಯಾರ 2.35, 2 36 ಮತ್ತು 3.73 ರಲ್ಲಿ ವೆಚ್ಚದ 4/5 ರಷ್ಟು ಭಾಗ ಶಿಕ್ಷಕರ ಸಂಬಳಕ್ಕಾಗಿ ಖರ್ಚಾಗುತ್ತಿರುವುದಾಗಿ ಪ್ರಸ್ತಾಪಿಸಲಾಗಿದೆ. ಇನ್ನೊಂದೆಡೆ ದೂರದರ್ಶನ, ವೀಡಿಯೋ, ಇನ್ಸಾಟ್-1 ಬಿ, ಇತ್ಯಾದಿಗಳ ಬಳಕೆಯ ಮೂಲಕ ಅನೌಪಚಾರಿಕ ವಿಧಾನಗಳಲ್ಲಿ ಶಿಕ್ಷಕರ ಅವಶ್ಯಕತೆಯನ್ನೇ ನಿವಾರಿಸಿ ಬಿಡುತ್ತದೆ. ಆದ್ದರಿಂದ ದಾಖಲೆ ಪತ್ರದಲ್ಲಿ ಅಡಕವಾಗಿರುವ ತರ್ಕವೇ ಶಿಕ್ಷಕರನ್ನು ತಳ್ಳಿ ಹಾಕಿ ಬಿಡುವುದಾಗಿದೆ. ಶಾಲಾ ಶಿಕ್ಷಣದಲ್ಲಿ ಒಂದು ಮಹತ್ವಪೂರ್ಣ ಹಾಗೂ ನಿರಾಕರಿಸಲಾಗದ ಆಂತರಿಕ ಭಾಗವಾದ ಹಾಗೂ ಎಸ್ ಎಫ್ ಐ. ದೃಢವಾಗಿ ಪ್ರತಿಪಾದಿಸುವ ಶಿಕ್ಷಕ ಮತ್ತು ಶಿಕ್ಷಣಾರ್ಥಿಯ ಸಂಬಂಧವನ್ನು ಕೂಡ ದಾಖಲೆಯು ಕ್ರಮೇಣವಾಗಿ ಕೊನೆಗೊಳಿಸಿ ಬಿಡುತ್ತದೆ.

ಅನೌಪಚಾರಿಕ ಶಿಕ್ಷಣವನ್ನು ಪ್ರತಿಪಾದಿಸುವುದರ ಜೊತೆಯಲ್ಲೇ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ಗೌರವಾನ್ವಿತ "ಮಾದರಿ ಶಾಲೆ"ಗಳನ್ನು ಸ್ಥಾಪಿಸುವ ತೀರ್ಮಾನಕ್ಕೆ ಅನುಮೋದನೆ ನೀಡಿರುವುದು ದಾಖಲೆ ಪತ್ರದ ಮತ್ತೊಂದು ಕೊಡುಗೆಯಾಗಿದೆ. ನಮ್ಮ ದೇಶದ ಜನನಿಬಿಡ ಪ್ರದೇಶಗಳ ಪೈಕಿ 1/5 ಭಾಗದಲ್ಲಿ ಶಾಲೆಗಳೇ ಇಲ್ಲ. ಉಳಿದ 4/5 ಭಾಗದಲ್ಲಿರುವ ಶಾಲೆಗಳಲ್ಲಿ ಶೇ. 40 ರಷ್ಟು ಪಕ್ಕಾ ಕಟ್ಟಡಗಳನ್ನು ಹೊಂದಿರುವುದಿಲ್ಲ. ಶೇ. 39.72 ಶಾಲೆಗಳಲ್ಲಿ ಕಪ್ಪು ಹಲಗೆಗಳಿಲ್ಲ. ಶೇ. 59.5 ರಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ. ಮತ್ತು ಶೇ. 35 ರಷ್ಟು ಶಾಲೆಗಳಲ್ಲಿ ನಾಲ್ಕು ಪ್ರತ್ಯೇಕ ತರಗತಿಗಳಿಗೆ ಬೋಧಿಸಲು ಕೇವಲ ಒಬ್ಬರೇ ಉಪಾಧ್ಯಾಯರಿರುತ್ತಾರೆ. (ಪ್ಯಾರ - 3.7) ಈ ದುಸ್ಥಿತಿಯನ್ನು ಒಪ್ಪಿಕೊಂಡಿರುವುದಕ್ಕಾದರೂ ನಾವು ಪ್ರಶಂಸಿಸಬಹುದಾದರೂ ಪರಿಸ್ಥಿತಿಯು ಸತತವಾಗಿ ಹದಗೆಡುವುದರತ್ತ ಗಮನ ಸೆಳೆಯಲು ನಿರ್ಬಂಧಿತರಾಗಿದ್ದೇವೆ. ಉದಾಹರಣೆಗಾಗಿ 1973 ರಿಂದ 1978 ರ ನಡುವೆ (3 ಮತ್ತು 4ನೇಯ ಅಖಿಲ ಭಾರತ ಶಿಕ್ಷಣ ಸಮೀಕ್ಷೆಗಳು) ಐದಕ್ಕಿಂತ ಹೆಚ್ಚು ಶಿಕ್ಷಕರನ್ನುಳ್ಳ ಶಾಲೆಗಳ ಸಂಖ್ಯೆಯು ಶೇ. 15 51 ರಿಂದ ಶೇ 8.85 ಕ್ಕೆ ತೀವ್ರವಾಗಿ ಇಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಹಾಲಿಯಿರುವ ಶಾಲೆಗಳಿಗೆಲ್ಲಾ ಯಥೋಚಿತ ಸೌಲಭ್ಯಗಳನ್ನು ಒದಗಿಸಬೇಕೆಂದು ಪ್ರತಿಯೊಬ್ಬರೂ ನಿರೀಕ್ಷಿಸಬಹುದಾಗಿದೆ. "ಮಾದರಿ ಶಾಲೆ"ಗಳೆಂದರೆ ಮಾದರಿ ಸೌಲಭ್ಯಗಳು ಹಾಗೂ ಉಪಕರಣಗಳು ಮತ್ತು ಉತ್ತಮ ತರಬೇತಿ ಹೊಂದಿದ ಹಾಗೂ ಆರ್ಥಿಕ ಸಂಭಾವನೆ ಪಡೆಯುವ ಶಿಕ್ಷಕರನ್ನು ಒದಗಿಸಲು ಗಣನೀಯವಾದ ಸಂಪನ್ಮೂಲಗಳ ಬಳಕೆಯೆಂದು ಅರ್ಥವಾಗುತ್ತದೆ. ಇಂದು ಎಲ್ಲಾ ಸಾಮಾಜಿಕ ಸೇವೆಗಳ ಸೌಲಭ್ಯವನ್ನು ಕಡಿತಗೊಳಿಸಲು ನಾವು ಕೇಳಲ್ಪಡುತ್ತಿರುವ ಏಕೈಕವಾದವೆಂದರೆ ಸಂಪನ್ಮೂಲಗಳ ಕೊರತೆಯೆಂಬುದಾಗಿದೆ. ಇಷ್ಟಾದರೂ ಸರ್ಕಾರವು ಲಭ್ಯವಿರುವ ಅತ್ಯಲ್ಪವಾದ ಸಂಪನ್ಮೂಲಗಳನ್ನು ಈ ರೀತಿ ಧಾರಾಳವಾಗಿ ವೆಚ್ಚ ಮಾಡುತ್ತದೆ. ಎಷ್ಟೆಲ್ಲಾ ನಿರಾಕರಿಸಿದರೂ ಈ ಮಾದರಿ ಶಾಲೆಗಳಲ್ಲಿ ನಿಜವಾಗಿ ಉನ್ನತ ವರ್ಗದವರಿಗೆ ಬಹುತೇಕ ಪ್ರವೇಶ ದೊರೆಯಲಿದ್ದು ಇದರಿಂದ ಉತ್ಕೃಷ್ಟತಾವಾದವೇ ಸರ್ಕಾರದ ಅಧಿಕೃತ ಧೋರಣೆಯಾಗುವುದು. ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ದೇಶದ ಬಹುತೇಕ ಮಕ್ಕಳನ್ನು ನಿರಕ್ಷರತೆ, ಅಜ್ಞಾನ, ಅಂಧಕಾರದ ವಶಪಡಿಸಲಾಗುತ್ತಿದೆ. ಉತ್ತಮ ಶಾಲೆಗಳನ್ನು ತೆರೆಯಲು ಎಸ್. ಎಫ್. ಐ. ನ ವಿರೋಧವಿಲ್ಲ, ಆದರೆ ನಮ್ಮದೇಶದ ಕೆಲವೇ ಶ್ರೀಮಂತ ವಿಭಾಗದವರಿಗೆ ಮಾತ್ರವಲ್ಲ.

ಶಿಕ್ಷಣ ನೀತಿಯಲ್ಲಿನ ಈ ರೂಪಾಂತರವು ಜನತೆಯು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರದ ನಿಲುವಿನಲ್ಲಿ ಉಂಟಾಗುತ್ತಿರುವ ಒಟ್ಟಾರೆ ಬದಲಾವಣೆಗೆ ಪೂರಕವಾಗಿದ್ದು ವಾಸ್ತವ ಅಗತ್ಯವಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ. ಪ್ರಸ್ತುತವಾಗಿ ಅನುಸರಿಸುತ್ತಿರುವ ಆರ್ಥಿಕ ನೀತಿಯಲ್ಲಿ ಈ ಅಂಶವು ಸ್ಪಷ್ಟವಾಗಿ ಗೋಚರಿಸುತ್ತಿದೆ. ಆಧುನೀಕರಣದ ಮೇಲೆ ಒತ್ತು ನೀಡುವುದೆಂದರೆ ಪೂರ್ವಾಪರ ಯೋಚನೆಯಿಲ್ಲದೇ ಬಂಡವಾಳ ಆಧಾರಿತವಾದ ತಂತ್ರಜ್ಞಾನವನ್ನು, ಅಧಿಕ ಶ್ರಮ ಹೊಂದುವ ನಮ್ಮ ಅರ್ಥಿಕತೆಯ ಮೇಲೆ ಹೇರಿ ವಿದೇಶಿ ಗುತ್ತೇದಾರಿ ಬಂಡವಾಳಕ್ಕೆ ಅನಿರ್ಬಂಧಿತ ಪ್ರವೇಶ ನೀಡುವುದಾಗಿದ್ದು ವಿದೇಶಿ ಹಾಗೂ ಭಾರತೀಯ ಹಿರಿಯ ಬಂಡವಾಳಗಾರರಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ಪರಿಣತಿಯುಳ್ಳ ತಜ್ಞರ ಅಗತ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವುದಾಗಿದೆ. ಬ್ರಿಟೀಶ್ ಸಾಮ್ರಾಜ್ಯಶಾಹಿಗಳಿಗೆ ಗುಮಾಸ್ತರ ಅಗತ್ಯವಿದ್ದಂತೆ ಗುತ್ತೇದಾರಿ ಬಂಡವಾಳಶಾಹಿಗಳಿಗೆ ತಾಂತ್ರಿಕ ಆಡಳಿತಾಧಿಕಾರಿಗಳ ಅವಶ್ಯಕತೆ ಇದ್ದು ಶಿಕ್ಷಣ ವ್ಯವಸ್ಥೆಯು ಇದನ್ನು ಪೂರೈಸಬೇಕಾಗಿದೆ. ಕೋಟ್ಯಾಂತರ ಸಂಖ್ಯೆಯಲ್ಲಿದ್ದರೂ ಉಳಿದ ಜನಸಮೂಹವನ್ನು ಈ ಮೊದಲಿನಂತೆ ಉಪೇಕ್ಷೆಗೆ ಒಳಪಡಿಸಲಾಗುವುದು ಇದು ಬಂಡವಾಳಶಾಹಿ ಅರಣ್ಯದ ಪ್ರತಿಕಾರದಿಂದ ಕೂಡಿದ ನಿಯಮವಾಗಿದೆ.

ವಯಸ್ಕರ ಶಿಕ್ಷಣ

ನಮ್ಮ ದೇಶದ ಅನಕ್ಷರಸ್ಥರ ಸಂಖ್ಯೆಯು ಸುಮಾರು 50 ಕೋಟಿ ಅಥವಾ ಜನಸಂಖ್ಯೆಯ ಶೇ. 66 ರಷ್ಟಿದ್ದು ಸ್ವತಂತ್ರ್ಯ ಸಮಯದ ಭಾರತದ ಇಡೀ ಜನಸಂಖ್ಯೆಯು ಸುಮಾರು ಒಂದೂವರೆಯಷ್ಟಿದೆ. ಆದ್ದರಿಂದ ವಯಸ್ಕರ ಶಿಕ್ಷಣವು ಅನಕ್ಷರತೆಯ ಸಮು

ಆರ್ಥಿಕ ಸಮೀಕ್ಷೆ :

ಏಳನೇ ಪಂಚವಾರ್ಷಿಕ ಯೋಜನೆ - ಸಂಪನ್ಮೂಲಗಳ ಅಭಾವ

ಆರ್. ಚಂದ್ರ

ಯೋಜನಾ ಆಯೋಗದ ಅವನತಿಯು ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ನಿಷ್ಪ್ರಯೋಜನದ ಹಿನ್ನೆಲೆಯಲ್ಲಿ ಏಳನೇ ಪಂಚವಾರ್ಷಿಕ ಯೋಜನೆಯು ಒಂದು ಔಪಚಾರಿಕ ಕಸರತ್ತು ಎಂದು ಹಿಂದಿನ ಲೇಖನದಲ್ಲಿ ಗಮನಿಸಿದೆವು. ಈ ಲೇಖನದಲ್ಲಿ ಹೊಸ ಯೋಜನೆಯು ಸಂಪನ್ಮೂಲಗಳ ಅಭಾವದಿಂದ ತೀವ್ರ ದುಃಸ್ಥಿತಿಯನ್ನೆದುರಿಸುತ್ತಿರುದನ್ನು ವಿಶ್ಲೇಷಿಸಲಾಗಿದೆ.

ಬೆಲೆ ಏರಿಕೆ

ಏಳನೇ ಯೋಜನೆಯು ಸಂಪನ್ಮೂಲ ಸಂಗ್ರಹಣೆಯಲ್ಲಿ ಅನೇಕ ಅನಿಶ್ಚಿತೆಗಳನ್ನು ಎದುರಿಸುತ್ತಿದೆ. ಮೊದಲನೇಯದಾಗಿ, ಯೋಜನೆಯ ಒಟ್ಟು ಮೊತ್ತ ಸಾರ್ವಜನಿಕ ಹಾಗೂ ಖಾಸಗೀ ರಂಗಗಳಲ್ಲಿ ರೂ. 3,48, 148 ಕೋಟಿ ಎಂದು ಹೇಳಲಾಗಿದೆ. ಒಂದು ವರ್ಷದ ಹಿಂದೆ, ಯೋಜನೆಯ ಕರಡು ರೂಪದಲ್ಲಿ ಈ ಮೊತ್ತ 1984-85 ರ ಬೆಲೆ ಮಟ್ಟದಲ್ಲಿ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಈಗ ಅದು 1985-86 ರ ಬೆಲೆ ಮಟ್ಟದಲ್ಲಿರುವುದು ಎಂದು ತಿಳಿದು ಬಂದಿದೆ. ಕಳೆದ ಒಂದು ವರ್ಷದಲ್ಲಿ ಸಗಟು ಮಾರುಕಟ್ಟೆಯ ಮತ್ತು ಗ್ರಾಹಕರ ಬೆಲೆ ಸೂಚಿಗಳು ಗಣನೀಯವಾಗಿ ಏರಿರುವುದರಿಂದ ಯೋಜನೆಯ ಗಾತ್ರದ ನಿಜ ಮೌಲ್ಯವು ಅಷ್ಟೇ ಪ್ರಮಾಣದಲ್ಲಿ ಇಳಿದಿರುವುದನ್ನು ಗಮನಿಸಬೇಕು. ಬೆಲೆ ಮಟ್ಟದ ನಿರಂತರ ಅಸ್ಥಿರತೆಯಿಂದಾಗಿ, ಯೋಜನೆಯ ಮೊತ್ತದ ನಿಜ ಮೌಲ್ಯವು ಮುಂದಿನ ವರ್ಷಗಳಲ್ಲಿ ಇನ್ನಷ್ಟು ಕಡಿಮೆಯಾಗುವುದು.

ವಿದೇಶಿ ನೆರವು

ಯೋಜನೆಯ ಒಟ್ಟು ಮೊತ್ತದಲ್ಲಿ, ರೂ 20000 ಕೋಟಿ–ರೂ 18000 ಕೋಟಿ ಸಾರ್ವಜನಿಕ ರಂಗಕ್ಕೆ ಮತ್ತು ರೂ 2000 ಕೋಟಿ ಖಾಸಗೀ ರಂಗಕ್ಕೆ –ಸಂಪನ್ಮೂಲ ವಿದೇಶಿ ನೆರವಿನಿಂದ ಎಂದು ನಿರೀಕ್ಷಿಸಲಾಗಿದೆ. ಇತ್ತೀಚೆಗಿನ ವರ್ಷಗಳಲ್ಲಿ ವಿಶ್ವಬ್ಯಾಂಕ್, ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ, ಇತರ ವಿದೇಶಿ ಮೂಲಗಳು – ಮುಖ್ಯವಾಗಿ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳು ಭಾರತಕ್ಕೆ ಸಾಲ ಸಹಾಯ ಕೊಡಲು ಕಠಿಣ ರಾಜಕೀಯ ಹಾಗೂ ಆರ್ಥಿಕ ಶರತ್ತುಗಳನ್ನು ವಿಧಿಸುತ್ತಿವೆ. ಈ ವಿದೇಶಿ ಮೂಲಗಳು ನೆರವು ನೀಡಲು ಭಾರತವನ್ನು ಆದ್ಯತೆಯ ದೇಶ ಎಂದು ಪರಿಗಣಿಸುತ್ತಿಲ್ಲ. ಅವುಗಳ ನೆರವು ಹೆಚ್ಚಾಗಿ ಮುಕ್ತ ಮಾರುಕಟ್ಟೆಯು, ಹೆಚ್ಚು ಬಡ್ಡಿಯು, ಖಾಸಗೀ ರಂಗಕ್ಕೆ ಆದ್ಯತೆಯು ಆಧಾರಗಳಲ್ಲಿರುವುದು. ಆದುದರಿಂದ ವಿದೇಶಿ ನೆರವು ನಿರೀಕ್ಷಿಸಿದಷ್ಟು ಪಡೆಯಬೇಕಾದರೆ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಾವಲಂಬನೆಗಳನ್ನು ಕಡೆಗಣಿಸುವ ಮತ್ತು ಸಾಲದ ಬಲೆಯಲ್ಲಿ ಬಿಗಿಯುವ ಅಪಾಯವಿರುವುದು. ನೆರವು ನೀಡುವ ನೆಪದಲ್ಲಿ ವಿದೇಶಿ ಶಕ್ತಿಗಳು ಬೇಹುಗಾರಿಕೆ, ವಿಚ್ಛಿದ್ರಕಾರಿ ಶಕ್ತಿಗಳ ಪ್ರಚೋದನೆ, ಇತ್ಯಾದಿ ಚಟುವಟಿಕೆಗಳಲ್ಲಿ ಪ್ರವೇಶಿಸಿ ರಾಷ್ಟ್ರೀಯ ಐಕ್ಯತೆಗೂ ಅಪಾಯವಿರುವುದು. ನಿರೀಕ್ಷಿಸಿದಷ್ಟು ವಿದೇಶಿ ನೆರವು ಸಿಗದಿದ್ದರೆ, ಆಂತರಿಕವಾಗಿ ಜನಕೋಟಿಯನ್ನು ಇನ್ನಷ್ಟು ಕೊರತೆ ಹಣ ಸೃಷ್ಟಿ, ತೆರಿಗೆ ಭಾರ, ಅವಶ್ಯಕ ವಸ್ತುಗಳ ಬೆಲೆ ಏರಿಕೆ, ಇತ್ಯಾದಿ ವಿಧಾನಗಳಿಂದ ಸುಲಿಯಬೇಕಾಗುವುದು.

ರಫ್ತು ಗಳಿಕೆ

ಏಳನೇ ಯೋಜನೆಗೆ ಸಂಪನ್ಮೂಲ ಗಳಿಸುವ ಇನ್ನೊಂದು ಪ್ರಧಾನ ಮಾಧ್ಯಮವು ರಫ್ತು ಗಳಿಕೆ. ಅದಕ್ಕಾಗಿ, ಹೊಸ ಆರ್ಥಿಕ ನೀತಿಯಲ್ಲಿ ಉದಾರ ಆಮದು ನೀತಿ, ರಫ್ತು ವ್ಯಾಪಾರಕ್ಕೆ ಭಾರೀ ಪ್ರೋತ್ಸಾಹ, ಆದರೆ ಯೋಜನೆಯ ಮೊದಲ ವರ್ಷದಲ್ಲಿಯೇ (1985-86), ಏಪ್ರಿಲ್ ಜುಲೈ ಅವಧಿಯಲ್ಲಿ ರಫ್ತು ರೂ 2942 ಕೋಟಿಗೇ ಸ್ಥಗಿತಗೊಂಡಿದೆ. ಕಳೆದ ವರ್ಷ ಈ ಅವಧಿಯಲ್ಲಿ ರಫ್ತು ರೂ. 2930 ಕೋಟಿಯಾಗಿತ್ತು. ಆಮದು ರೂ. 4634 ಕೋಟಿಯಿಂದ ರೂ 6021 ಕೋಟಿಗೆ ನೆಗೆದಿದೆ! ಪರಿಣಾಮವಾಗಿ ಜುಲೈ 85ರಲ್ಲಿ ರೂ 3000 ಕೋಟಿಗೂ ಹೆಚ್ಚಿನ ವಿದೇಶಿ ವ್ಯಾಪಾರದಲ್ಲಿ ಕೊರತೆ ಉಂಟಾಗಿದೆ. ವರ್ಷಾಂತ್ಯದಲ್ಲಿ ಕೊರತೆ ರೂ 7000 ಕೋಟಿಗೇರಲಿದೆ! 1984-85 ರಲ್ಲಿ ಕೊರತೆ ರೂ 5325 ಕೋಟಿಯಷ್ಟಾಗಿತ್ತು. (ಫೈನಾನ್ಸಿಯಲ್ ಎಕ್ಸ್‌ಪ್ರೆಸ್ : 8-11-85). ಈಗಾಗಲೇ ನಮ್ಮ ದೇಶದ ವಿದೇಶಿ ಸಾಲದ ಹೊರೆ ರೂ 20000 ಕೋಟಿಗೂ ಮೀರಿದೆ! ಹೆಚ್ಚುತ್ತಿರುವ ವಿದೇಶಿ ವ್ಯಾಪಾರದ ಕೊರತೆಯನ್ನು ನೀಗಿಸಲು ಆಂತರಿಕ ಮಾರುಕಟ್ಟೆಯನ್ನು ಅಲಕ್ಷಿಸಿ, ಇನ್ನಷ್ಟು ಅಗ್ಗದಲ್ಲಿ ಹೆಚ್ಚು ಸಾಮಗ್ರಿಗಳನ್ನು ರಫ್ತು ಮಾಡಬೇಕು; ಅಥವಾ, ಇನ್ನಷ್ಟು ವಿದೇಶಿ ಸಾಲ ಸಹಾಯಗಳಿಗೆ ಕೈ ಒಡ್ಡಬೇಕು. ಆಗ, ಸ್ವಾವಲಂಬನೆಯ ಗುರಿ ದೂರ ಉಳಿದು, ಸಾಲದ ಬಲೆ ಬಿಗಿಯುವುದು, ಯೋಜನೆಯ ಗುರಿ ಸೋಲುವುದು.

ಸಾರ್ವಜನಿಕ ರಂಗದ ಲಾಭ ಗಳಿಕೆ

ಏಳನೇ ಯೋಜನೆಯ ಅವಧಿಯಲ್ಲಿ ಆಂತರಿಕವಾಗಿ ಸಂಗ್ರಹಿಸಬೇಕಾದ ಸಂಪನ್ಮೂಲದಲ್ಲಿ ರೂ 35000 ಕೋಟಿ ಸಾರ್ವಜನಿಕ ರಂಗದ ಲಾಭಗಳಿಕೆಯ ಪಾಲು ಎಂದು ನಿರೀಕ್ಷಿಸಲಾಗಿದೆ. ಇದುವರೆಗಿನ ಅನುಭವದಿಂದ ಈ ನಿರೀಕ್ಷೆಯೂ ಮೃಗ ಮರೀಚಿಕೆ ಆದೀತು. ಅನೇಕ ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳು ಈಗಾಗಲೇ ನಷ್ಟ ಅನುಭವಿಸುತ್ತಿರುವಾಗ, ಮುಂದಿನ ವರ್ಷಗಳಲ್ಲಿ ನಷ್ಟನಿವಾರಿಸಿ, ಭಾರಿ ಪ್ರಮಾಣದಲ್ಲಿ ಲಾಭಗಳಿಸಲಿರುವವು ಎಂದರೆ ನಂಬಲಾಗದು. ಆಧುನೀಕರಣ, ಆಂತರಿಕ ಮಾರುಕಟ್ಟೆಯ ವಿಸ್ತರಣೆ, ಉತ್ಪಾದನೆಯ ನ್ಯಾಯ ವಿತರಣೆ, ಆಡಳಿತದಲ್ಲಿ ಅಧಿಕಾರಶಾಹಿಗಳ ಹಾಗೂ ಬಂಡವಾಳ ಶಾಹಿಗಳ ಪ್ರಭಾವ ಕಡಿಮೆಯಾಗಿ ಕಾರ್ಮಿಕರ ಪ್ರಾಮಾಣಿಕ ಮತ್ತು ಪರಿಣಾಮಕಾರಿ ಪಾತ್ರ, ಇತ್ಯಾದಿ ಆಮೂಲಾಗ್ರ ಸುಧಾರಣೆಗಳಾಗದೆ, ಸಾರ್ವಜನಿಕ ರಂಗ ಹೆಚ್ಚಿನ ಲಾಭ ಗಳಿಸುವುದು ಅಸಾಧ್ಯ. ಆದುದರಿಂದ ಈ ಕ್ಷೇತ್ರದಿಂದ ಯೋಜನೆಗೆ ಸಂಪನ್ಮೂಲ ಪಡೆಯುವುದೆಂದರೆ, ಅದರ ಉತ್ಪಾದನೆಗಳ ಬೆಲೆಗಳನ್ನು ಅವೈಜ್ಞಾನಿಕವಾಗಿ ಆಡಳಿತ ನಿರ್ದೇಶನಗಳಿಂದ ಹೆಚ್ಚಿಸಿ, ಜನಸಾಮಾನ್ಯರ ಮೇಲೆ ಅಪ್ರತ್ಯಕ್ಷವಾಗಿ ಅದರ ಭಾರವನ್ನು ಹೇರುವುದು, ಅಷ್ಟೇ.

[7ನೇ ಪುಟ ನೋಡಿ]

ಸ್ಯೆಯ ಒಂದು ಮುಖ್ಯ ಅಂಗವಾಗಿರುತ್ತದೆ. ಈ ಬಗ್ಗೆ ದಾಖಲೆ ಪತ್ರವು ತನ್ನ ಕಾಳಜಿಯನ್ನು ವ್ಯಕ್ತಪಡಿಸಿದರೂ ಪರಿಸ್ಥಿತಿಯ ತೀವ್ರತೆಯನ್ನು ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ ಇಡೀ ಯೋಜನೆಯ ಅವಧಿಗೆ ವಯಸ್ಕರ ಶಿಕ್ಷಣಕ್ಕಾಗಿ ಕೇವಲ 360 ಕೋಟಿ ರೂಪಾಯಿಗಳನ್ನು ಗೊತ್ತು ಪಡಿಸಿರುವುದನ್ನು ಕಾಣುತ್ತೇವೆ.

ಪ್ರಥಮ ಯೋಜನೆಗೆ ಹೋಲಿಸಿದರೆ ಇದು ಶೇ. 3.2 ರಷ್ಟು ಕಡಿಮೆಯಾಗಿದ್ದು ಶಿಕ್ಷಣದ ವೆಚ್ಚದ ಶೇ. 3.5ರಷ್ಟರಿಂದ ಇಂದು ವಯಸ್ಕರ ಶಿಕ್ಷಣದ ಬಾಬ್ತಿನ ಮೊತ್ತ 0.3 ಕ್ಕೆ ಇಳಿದಿದೆ. ಹಣದುಬ್ಬರದ ದರವನ್ನು ಪರಿಗಣಿಸಿದರೆ ಒಟ್ಟು ಮೊತ್ತವು ಸಹ 5ನೇ ಯೋಜನೆಯ ಅವಧಿಯ, 325 ಕೋಟಿ ರೂಗಳಿಗಿಂತ 360 ಕೋಟಿ ರೂ.ಗಳ ಮೊತ್ತವು ಕಡಿಮೆಯೆಂದಾಗುತ್ತದೆ. ವಯಸ್ಕರ ಸಾಕ್ಷರತೆಯನ್ನು ಪ್ರತ್ಯೇಕವಾಗಿ ಸಾಧಿಸಲಾಗುವುದಿಲ್ಲವೆಂಬುದನ್ನು ಪರಿಗಣನೆಗೆ ತೆಗೆದುಕೊಂಡರೆ ಮಾತ್ರ ಈ ಕಡಿತದಿಂದಾಗುವ ದುಷ್ಪರಿಣಾಮವು ಪೂರ್ಣವಾಗಿ ಅರಿಯಬಹುದು. ಅನಕ್ಷರಸ್ಥರು ನಿರುದ್ಯೋಗಿಗಳೂ ಸಹ ಆಗಿದ್ದಾರೆ. ಅವರಿಗೆ ಜೀವನ ನಿರ್ವಹಣೆಗೆ ಅಕ್ಷರ ಜ್ಞಾನದೊಂದಿಗೆ ಉದ್ಯೋಗಾವಕಾಶವು ಬೇಕಾಗಿದೆ ಇಲ್ಲವಾದರೆ ಅವರಿಗೆ ಯಾವ ಉದ್ದೇಶಕ್ಕಾಗಿ ವಿದ್ಯೆ ಕಲಿಸುವುದು, ನಿರ್ದಿಷ್ಟ ಕೆಲಸವನ್ನಾಧರಿಸಿದ ತಿಳುವಳಿಕೆಯುಳ್ಳ ಸಾಕ್ಷರತೆಯನ್ನು ಪಸರಿಸುವ ಕರ್ತವ್ಯವನ್ನು ನಿರ್ವಹಿಸಲು ವಿದ್ಯಾವಂತ ನಿರುದ್ಯೋಗಿ ಯುವಜನಾಂಗದ ಒಂದು ಸೈನ್ಯವೇ ಸಿದ್ಧವಾಗಿದ್ದು ಈ ಕಾರ್ಯಸಾಧನೆಗೆ ವಿನಿಯೋಗಿಸಬಹುದಾಗಿದೆ. ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಕಷ್ಟು ಹಣಕಾಸು ಸಂಪನ್ಮೂಲಗಳನ್ನು ಒದಗಿಸುವ ಬದ್ಧತೆಯನ್ನು ಹೊಂದಿರಲೇಬೇಕಾಗುತ್ತದೆ.

ಈ ರೀತಿಯ ಸಮಗ್ರ ದೃಷ್ಟಿಕೋನವನ್ನು ತಳೆಯದೇ ಸರ್ಕಾರದ ದಾಖಲೆ ಪತ್ರವು ವಿಡಿಯೋ ದೂರದರ್ಶನ, ಇನ್ಸ್ಯಾಟ್-1 ಬಿ ಗಳ ಮೂಲಕದಿಂದಲೇ ದೂರದಿಂದ ಕಲಿಯುವ ಮೂಲಕ ಅನಕ್ಷರತೆಯನ್ನು ನಿರ್ಮೂಲನ ಮಾಡಬಹುದೆಂದು ಭೋಧಿಸುತ್ತದೆ. ಈ ಕಾರ್ಯಕ್ರಮಕ್ಕೆ ಅಗತ್ಯವಾದ ಹಣಕಾಸು ಸಂಪನ್ಮೂಲಗಳು ದುಂದುವೆಚ್ಚವಾಗುವುದಲ್ಲದೇ ಎಲ್ಲಾ ರೀತಿಯಲ್ಲಿಯೂ ಪರಿಣಾಮಕಾರಿಯಾಗುವುದಿಲ್ಲವೆಂದು ಸಾಬಿತಾಗುತ್ತದೆ

ಅನಕ್ಷರತೆಯ ನಿರ್ಮೂಲನೆಯ ಪ್ರಕ್ರಿಯೆಯಲ್ಲಿ ಸಾರ್ವತ್ರಿಕ, ಪ್ರಾಥಮಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಎರಡೂ ದ್ವಿಮುಖ ಅಂಶಗಳಾಗಿವೆ. ಎರಡೂ ವಿಚಾರದಲ್ಲೂ ಸರ್ಕಾರದ ದಾಖಲೆ ಪತ್ರವು ವಿಫಲವಾಗಿದೆ. ಇದರಲ್ಲಿರುವ ಶಿಫಾರಸ್ಸುಗಳ ಅನಕ್ಷರತೆಯನ್ನು ನಿರ್ಮೂಲನ ಮಾಡುವ ಬದಲು ಇನ್ನೂ ಅಧಿಕಗೊಳಿಸುತ್ತದೆ.

ವೃತ್ತಿಪರ ಶಿಕ್ಷಣ

10+2+3 ಪದ್ಧತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ದೇಶದಾದ್ಯಂತ ಅಬ್ಬರದ ಪ್ರಚಾರದೊಂದಿಗೆ ವೃತ್ತಿಪರ ಶಿಕ್ಷಣವನ್ನು ಪ್ರಸ್ತಾಪಿಸಲಾಯಿತು +2 ಹಂತದಲ್ಲಿ ವೃತ್ತಿ ತರಬೇತಿಯ ದಾರುಣ ಸ್ಥಿತಿಯು ಈ ಬಗ್ಗೆ ಸರ್ಕಾರಕ್ಕೆ ಅತ್ಯಲ್ಪ ಗಂಭೀರತೆಯಿತ್ತೆಂಬುದನ್ನು ಸಾಬೀತು ಪಡಿಸುತ್ತದೆ. ಈ ಹಂತದಲ್ಲಿ ಶೈಕ್ಷಣಿಕ ಸೌಲಭ್ಯಗಳ ಕೊರತೆಯ ಬಗ್ಗೆ ಎಸ್. ಎಫ್. ಐ ಅನೇಕ ಬಾರಿ ಸರ್ಕಾರದ ಗಮನಕ್ಕೆ ತಂದಿದೆ. ವಾಸ್ತವವಾಗಿ ಈ ಹಂತವನ್ನು ಶಿಕ್ಷಣ ಪದ್ಧತಿಯಿಂದ ಆದಷ್ಟು ವಿದ್ಯಾರ್ಥಿಗಳನ್ನು ತೊಡೆದು ಹಾಕುವ ಮತ್ತು ಉನ್ನತ ಶಿಕ್ಷಣದ ಪ್ರವೇಶವನ್ನು ನಿಯಂತ್ರಿಸುವ ಜಾಲವನ್ನಾಗಿ ಉಳಿಸಿಕೊಳ್ಳಲು +2 ಹಂತದಲ್ಲಿನ ಸದ್ಯದ ಸ್ಥಿತಿಯನ್ನು ದಾಖಲೆ ಪತ್ರವು ಅನುಮೋದಿಸುತ್ತದೆ.

ಈ ಪ್ರಯೋಗದ ವಿಫಲತೆಗೆ ವೃತ್ತಿ ತರಬೇತಿ ಶಿಕ್ಷಣದ ಬಗ್ಗೆ ಜನರಲ್ಲಿರುವ ಸಾಂಸ್ಕೃತಿಕ ಪೂರ್ವಾಗ್ರಹವೂ ಒಂದು ಕಾರಣವೆಂದು ಗುರುತಿಸಲಾಗಿದೆ. (ಪ್ಯಾರಾ 4.30) ಇದಕ್ಕಿಂತ ಅಸಂಬದ್ಧವಾದುದು ಮತ್ತೊಂದಿರಲು ಸಾಧ್ಯವಿಲ್ಲ. ನಮ್ಮ ಆರ್ಥಿಕ ವ್ಯವಸ್ಥೆಯು ಉದ್ಯೋಗವಕಾಶಗಳನ್ನು ಸೃಷ್ಟಿಸುವಲ್ಲಿ ಅತ್ಯಲ್ಪ ಸಾಮರ್ಥ್ಯವನ್ನು ಹೊಂದಿರುವ ಕಾರಣದಿಂದಲೇ ವೃತ್ತಿ ತರಬೇತಿ ಶಿಕ್ಷಣವು ಮುನ್ನಡೆ ಸಾಧಿಸಲಾಗಲಿಲ್ಲ ಪ್ರತಿ ಪಂಚವಾರ್ಷಿಕ ಯೋಜನೆಯೂ ಉದ್ಯೋಗಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವನ್ನು ಕಾಣುತ್ತಿದೆ. ನಮ್ಮ ದೇಶದಲ್ಲಿನ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು (1.12 ಕೋಟಿಯಷ್ಟು ಮಂದಿ ವ್ಯರ್ಥ ತರಬೇತಿ ಹೊಂದಿರುವವರು ಸೇರಿದಂತೆ) ಒಟ್ಟು ವಿದ್ಯಾವಂತ ನಿರುದ್ಯೋಗಿಗಳ ಒಂದು ಭಾಗ ಮಾತ್ರವಾಗಿದ್ದು 4 ಕೋಟಿಯೆಂದು ಅಂದಾಜು ಮಾಡಲಾಗಿರುವ ಒಟ್ಟು ನಿರುದ್ಯೋಗಿ ಜನಸಂಖ್ಯೆಯಲ್ಲಿ ಒಂದು ಸಣ್ಣ ಭಾಗವಾಗಿದೆ.

ಈ ಪ್ರಶ್ನೆಯ ಬಗ್ಗೆ ಪ್ರಾಮಾಣಿಕವಾಗಿ ಪರಿಶೀಲಿಸುವ ಬದಲು ವೃತ್ತಿ ತರಬೇತಿ ಶಿಕ್ಷಣವನ್ನು +2 ಹಂತದೊಂದಿಗೆ ಜೋಡಿಸುವುದೋ ಅಥವಾ ಒಂದು ಸ್ವತಂತ್ರ ಸಂಸ್ಥೆಯಾಗಿ ಮಾರ್ಪಡಿಸುವುದೋ ಅಥವಾ ಸಂಪೂರ್ಣವಾಗಿ ಹೊಸ ಮಾದರಿಯೊಂದನ್ನು ಆವಿಷ್ಕರಿಸುವುದೋ (ಪ್ಯಾರಾ 4.112) ಎಂದು ಹೇಳುವ ಮೂಲಕ ದಾಖಲೆ ಪತ್ರವು ಸಮಸ್ಯೆಗೆ ಪರದೆ ಎಳೆದಿದೆ. ಆದ್ದರಿಂದ ಈ ಪ್ರಶ್ನೆಯನ್ನು ಮುಕ್ತವಾಗಿಡುವ ಮೂಲಕ ಸದ್ಯದ ಅರಾಜಕತೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಲಾಗಿದೆ.

1953 ರಷ್ಟು ಹಿಂದೆಯೇ ಲಕ್ಷ್ಮಣಸ್ವಾಮಿ ಮೊದಲಿಯಾರ್ ಆಯೋಗವು ಪ್ರೌಢ ಶಿಕ್ಷಣದ ಬಗ್ಗೆ ತನ್ನ ಶಿಫಾರಸ್ಸುಗಳನ್ನು ನೀಡುವಾಗ ತಂತ್ರಜ್ಞರು ಮತ್ತು ನುರಿತ ಸಿಬ್ಬಂದಿಯಿಲ್ಲದೆ ರಾಜಕೀಯ ಸ್ವಾತಂತ್ರ್ಯವನ್ನು ಆರ್ಥಿಕ ಸ್ವಾತಂತ್ರ್ಯವನ್ನಾಗಿ ಪರಿವರ್ತಿಸಲಾಗುವುದಿಲ್ಲವಾದ್ದರಿಂದ ವೃತ್ತಿ ಶಿಕ್ಷಣದ ವಿಸ್ತರಣೆಯನ್ನು ಪ್ರತಿಪಾದಿಸಿತ್ತು ಸರ್ಕಾರವು ಅಂದು ಈ ಶಿಫಾರಸ್ಸುಗಳನ್ನು ಅಂಗೀಕರಿಸಿದ್ದರೂ ಕಳೆದ ಮೂರು ದಶಕಗಳ ಬೆಳವಣಿಗೆಯನ್ನು ಗಮನಿಸಿದಾಗ ಕಾರ್ಯಗತಗೊಳಿಸಲಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸದ್ಯದ ದಾಖಲೆ ಪತ್ರವು ಸಹ ಶೇ. 50 ಕ್ಕಿಂತ

[7ನೇ ಪುಟ ನೋಡಿ]

ರವೀಂದ್ರ ಕಲಾಕ್ಷೇತ್ರ ಕೇಂದ್ರಿತ ರಂಗಭೂಮಿಯ ಮೇಲೊಂದು ಹೊಸ ಧಾಳಿ

ನಮ್ಮ ನಾಡಿನ ಆರ್ಥಿಕ, ರಾಜಕೀಯ ಜೀವನದ ಕೇಂದ್ರೀಕರಣದೊಡನೆ ಸಾಂಸ್ಕೃತಿಕ ಜೀವನವೂ ಕೇಂದ್ರೀಕರಣಗೊಳ್ಳುತ್ತಾ, ವೈವಿಧ್ಯಮಯ ಸಂಸ್ಕೃತಿ ಜಡಗೊಂಡು ನಿಸ್ಸಾರವಾಗುತ್ತಿದೆ. ಯಜಮಾನ ಸಂಸ್ಕೃತಿಯ ಅಧಿಪತ್ಯವನ್ನು ಸ್ಥಾಪಿಸುವ ಸಾಧನಗಳಾಗುತ್ತಿವೆ ರೇಡಿಯೋ, ದೂರದರ್ಶನ ಸಿನಿಮಾ, ಪತ್ರಿಕೆ ಇತ್ಯಾದಿ ಮಾಧ್ಯಮಗಳು ಈ ಕೇಂದ್ರೀಕರಣಕ್ಕೊಂದು ಸವಾಲಾಗಿ ರೂಪುಗೊಳ್ಳ ಬೇಕಾಗಿದ್ದ—ಬಹುದಾಗಿದ್ದ, ರಂಗಭೂಮಿ ಕೂಡ ಕರ್ನಾಟಕ ಸಾಂಸ್ಕೃತಿಕ ಕ್ಷೇತ್ರದ (ರಾ)ಧಾನ ಸೌಧವಾಗಿರುವ ರವೀಂದ್ರ ಕಲಾಕ್ಷೇತ್ರದ ಸುತ್ತಲೇ ಸುತ್ತುತ್ತಿರುವುದೂ ಇದೇ ಪ್ರಕ್ರಿಯೆಯ ಅಂಗ.

ಕೆಲವೇ ವರ್ಷಗಳ ಹಿಂದೆ, ಕನ್ನಡ ರಂಗಭೂಮಿಯ ವಸಂತ ಕಾಲದಲ್ಲಿ, ಸಾಂಸ್ಕೃತಿಕ ವಿಕೇಂದ್ರಿಕರಣದ ಒಂದು ಅಪೂರ್ವ ಪ್ರಯತ್ನವಾಗಿ, ಹಳ್ಳಿ–ಪಟ್ಟಣಗಳಲ್ಲೆಲ್ಲಾ "ರಂಗ ಜಾಥಾ" ನಡೆಸಿ, ಆ ಮೂಲಕ 20 ಕ್ಕೂ ಹೆಚ್ಚು ಘಟಕಗಳ ಸಮುಚ್ಚಯವಾಗಿರುವ "ಸಮುದಾಯ", ಕನ್ನಡ ರಂಗಭೂಮಿಯನ್ನು ಕೊರೆವ ಚಳಿ ಬಂದಡಸಿರುವ ಈ ದಿನಗಳಲ್ಲಿ, ತಾನೂ ಈ ಚಳಿಯನ್ನು ಎದುರಿಸುತ್ತಿದ್ದರೂ ಕೂಡ, ಕಲಾಕ್ಷೇತ್ರ ಕೇಂದ್ರಿತ ರಂಗ ಪ್ರಜ್ಞೆಯ ಮೇಲೆ ಜನಪದದ ಕಂಪನ್ನು ಹೊತ್ತು ಹಿತವಾದ ಬೆಚ್ಚನೆಯ ಗಾಳಿಯಾಗಿ ಬೀಸಿತು.

ಡಿಸೆಂಬರ್ ಕೊನೆಯ ವಾರದಲ್ಲಿ ಬೆಂಗಳೂರಿನಲ್ಲಿ ಆ ಮೊದಲು ತುಮಕೂರು, ಕೆಜಿಎಫ್, ಗೌರಿಬಿದನೂರುಗಳಲ್ಲಿನ ಪ್ರದರ್ಶನಗಳಿಗೆ ಮೂಡಿಬಂದ ಪ್ರತಿಕ್ರಿಯೆ ಈ ಮಾತಿಗೆ ಸಮರ್ಥನೆಯೆಂತಿದೇ ಫೋರ್ಡ್ ಪ್ರೇರಿತ ರಂಗ ಚಟುವಟಿಕೆಯ ಬರಡುತನಕ್ಕೊಂದು ವೈದೃಶ್ಯವಾಗಿದೆ.

ಸಿಂಧನೂರು, ರಾಯಚೂರು, ಹರಪನಹಳ್ಳಿಗಳ ಗ್ರಾಮೀಣ ಕಲಾವಿದ ಸಂಪತ್ತನ್ನು, ಅವರಿಗೊಗ್ಗುವ ಜನಪದ ಜನಪರ ವಸ್ತುಗಳನ್ನು, ತಂತ್ರಗಳನ್ನು ಬಳಸಿ ರೂಪುಗೊಂಡ ಈ ನಾಟಕಗಳ ಆ ಊರುಗಳಲ್ಲಿ ನಾಟಕೋತ್ಸವವಾಗಿ, ಜನಪದ ಕಲಾಮೇಳವಾಗಿ ಪ್ರದರ್ಶನಗೊಂಡು ಒಂದು ಉತ್ಸವದ ಭಾವನೆಯನ್ನು ಮೂಡಿಸಿದ್ದವು. ನೆರೆಯ ಗುಲ್ಬರ್ಗಾ ಮೊದಲಾದ ಊರುಗಳಲ್ಲಿ ಪ್ರವಾಸ ಕೂಡ ನಡೆದಿತ್ತು. ಈ ಎಲ್ಲಾ ನಾಟಕಗಳು ಬೆಂಗಳೂರಿನಲ್ಲಿ ಪ್ರದರ್ಶಿತವಾಗದೆ ಹೋದರೂ ಜಾನಪದ ಕಥಾನಕಗಳೇ ಮೂಲವಾದ "ಸತಿಯೊಡನೆ ಸಹಗಮನ", "ಜೋಗತಿ ಕಲ್ಲು", ಬ್ರೆಕ್ಟ್‌ನ "caucasian chalk circe" ನ ಕನ್ನಡ ರೂಪ "ಅಲಾಮನ ಅದ್ಭುತ ನ್ಯಾಯ" ಹಾಗೂ ಸಿದ್ಧಲಿಂಗಯ್ಯನವರ "ಏಕಲವ್ಯ" ನಾಟಕಗಳು ಪ್ರದರ್ಶಿತವಾದವು.

ಮೊದಲ ದಿನ, ಗ್ರಾಮೀಣ ಸ್ವನಿರ್ಮಿತ ರಂಗ ಸ್ಥಳದ ಕಿಕ್ಕಿಂಥಳ್ಳೆ ಒಗ್ಗಿದ ನಟರು, ರವೀಂದ್ರ ಕಲಾಕ್ಷೇತ್ರದ ರಂಗ ವಿಸ್ತಾರದಲ್ಲಿ ಗಡಿಬಿಡಿಗೊಂಡಂತೆ ಕಂಡರೂ ಎರಡನೆಯ ದಿನಕ್ಕಾಗಲೆ ಒಗ್ಗಿ, ತಮ್ಮ ಅವಶ್ಯಕತೆಗನುಗುಣವಾಗಿ ರಂಗ ಸಜ್ಜಿಕೆಯನ್ನು ಏರ್ಪಡಿಸಿಕೊಂಡು ಆತ್ಮವಿಶ್ವಾಸದ ಪ್ರದರ್ಶನವನಿತ್ತ ಈ ತಂಡಗಳ ಕ್ರಿಯಾಶೀಲತೆ ಪ್ರಶಂಸನೀಯ. ಬೆಂಗಳೂರಿನ ನಟರ ಅತಿ ವೃತ್ತಿಶೀಲತೆ, ಹಲವಾರು ನಾಟಕಗಳಲ್ಲಿನ ಪರಿಣತಿಗಿಂತ ಭಿನ್ನವಾದ ಇದೀಗ ತಾನೆ ರಂಗಭೂಮಿಯಲ್ಲಿ ಹೆಜ್ಜೆಯನ್ನಿರಿಸಿದ, ವೃತ್ತಿಯಲ್ಲಿ ಗ್ರಾಮೀಣ ಕುಶಲ ಕರ್ಮಿಗಳು ಕಣ್ಣುಪುಟ್ಟ ಉದ್ಯೋಗಸ್ಥರು, ರೈತರು, ವಿದ್ಯಾರ್ಥಿಗಳ ತಂಡವಿದೆಂಬುದು ಕೂಡ ಈ ರಂಗ ಪ್ರಯೋಗಗಳ ಪ್ರೌಢ್ಯವೂ ಪನದಲ್ಲಿ ಗಮನಾರ್ಹವಾದದ್ದು.

ಈ ಪ್ರಯೋಗಗಳಲ್ಲೆಲ್ಲಾ, ಅನೇಕ ದೃಷ್ಟಿಯಿಂದ ಅತ್ಯಂತ ಯಶಸ್ವಿಯಾದದ್ದು "ಸತಿಯೊಡನೆ ಸಹಗಮನ" ಕನ್ನಡ ನಾಡನ್ನು ಇಂದು ಕಳವಳಕ್ಕೀಡುಮಾಡಿರುವ ಬರಗಾಲದ ಸಂದರ್ಭದಲ್ಲಿ, ಬರಗಾಲ ಪರಿಹಾರ ಕಾಮಗಾರಿಯಾಗಿ ಕೆರೆ ಕಟ್ಟಿಸುವ ಮಲ್ಲನಗೌಡ, ಬಂಜರಾದ ಕೆರೆಯ ಒಡಲಲ್ಲಿ ಜಲವನ್ನು ಉಕ್ಕಿಸಲೆಂದು ಗಂಡ ಮನೆಯಲ್ಲಿಲ್ಲದ ಕಿರಿಯ ಸೊಸೆಯನ್ನು ಬಲವಂತವಾಗಿ ಆಹುತಿ ನೀಡುವ, ತನ್ನ ಹೆಂಡತಿಮೇಲಿನ ಪ್ರೇಮದಿಂದ ಗಂಡನೂ ಸಹಗಮನ ಮಾಡುವ ಜನಪ್ರಿಯ ಜಾನಪದ ಗೀತ ಕಥಾನಕ ಈ ರೂಪಕದ ವಸ್ತು. ಆ ವಸ್ತುವಿನಲ್ಲಿ ಅಡಕವಾಗಿದ್ದ, ಪಾಳೆಯಗಾರಿ ಸಮಾಜದ ನಂಬಿಕೆಯನ್ನು ಪ್ರಶ್ನಿಸುತ್ತಾ, ಬಲಿ ಕೊಟ್ಟರೂ ತುಂಬದ ಕೆರೆಯನ್ನು ನೀಗದ ಬರವನ್ನು ಅಂತ್ಯದಲ್ಲಿ ತೋರಿಸಿದ್ದು ಪರಿಣಾಮಕಾರಿಯಾಗಿತ್ತು.

ಇಡೀ ರಂಗ ಪ್ರದೇಶವನ್ನು ಪೂರ್ಣವಾಗಿ ಸದುಪಯೋಗ ಪಡಿಸಿಕೊಂಡ ಚಲನೆಗಳು, ತುಂಬು ಕಂಠದ ಭಾಗವತರು ಹಾಗೂ ಉತ್ತಮ ಸಂಗೀತ ಸಂಯೋಜನೆ, ಕೆರೆಗೆಹಾರವಾದ ಭಾಗಿರಥಿ, ಸಹಗಮನ ಮಾಡಿದ ಪತಿ, ಗೌಡ–ಗೌಡತಿಯರ ಉತ್ತಮ ಅಭಿನಯ ಈ ನಾಟಕದ ಯಶಸ್ಸಿಗೆ ಕಾರಣವಾದುವು.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಸಮುದಾಯ ಘಟಕ ಪ್ರದರ್ಶಿಸಿದ ಏಕಲವ್ಯ ಕೂಡ ಕಾಡಿನಲ್ಲಿ ವಾಸವಾಗಿದ್ದ ಬೇಡ ಜನರ ಹಾಗೂ ಅಂದಿನ ಆಳುವ ರಾಜವರ್ಗದ ನಡುವಣ ಸಂಘರ್ಷವನ್ನು ವರ್ಣಾಶ್ರಮ ಧರ್ಮದ, ಗುಲಾಮಿ ವ್ಯವಸ್ಥೆಯನ್ನು ಸೂಚಿಸುವಂತಹದ್ದು. ಬಯಲಾಟದ ರೂಪದ ಅಳವಡಿಕೆ ಅದಕ್ಕೆ ತಕ್ಕ ನೃತ್ಯಗಳು, ಏಕಲವ್ಯ ಪಾತ್ರಧಾರಿಯ ನೃತ್ಯ, ಪಟುತ್ವ, ಅರ್ಜುನ, ಏಕಲವ್ಯನ ತಾಯಿಯ ನಟನೆ, ಮೇಳ ಇವುಗಳು ಗುರುತಿಸಬೇಕಾದ ಅಂಶಗಳು. ಗ್ರಾಮೀಣ ಕುಶಲ ಕರ್ಮಿಗಳೇ ಬಹಳವಾಗಿದ್ದ ಈ ತಂಡದ ಕೌಶಲ್ಯ ಶ್ಲಾಘನೀಯವಾದದ್ದು. ಆದರೆ ಅಲ್ಲಲ್ಲಿ ಎಳೆದಂತೆ ಕಾಣುವ ದೃಶ್ಯಗಳನ್ನು ಚೊಕ್ಕವಾಗಿ ಸಂಗ್ರಹಗೊಳಿಸಬೇಕಾಗಿದೆ.

ರಾಯಚೂರು ಸಮುದಾಯದ ಇನ್ನೊಂದು ಪ್ರಯೋಗ ಅಲಾಮನ ಅದ್ಭುತ ನ್ಯಾಯ, ಬ್ರೆಕ್ಟನ ನಾಟಕದ ಕನ್ನಡ ರೂಪ. [ಕನ್ನಡ ರೂಪಾಂತರ: ರಘುನಂದನ್) ಮಾಲೀಕತ್ವಕ್ಕೆ ಫಲ ದಕ್ಕಬೇಕೋ! ಶ್ರಮಕ್ಕೆ ಬೆಲೆ ಸಿಗಬೇಕೋ ? ಎನ್ನುವ ವರ್ಗಸಂಘರ್ಷದ ಮೂಲ ಪ್ರಶ್ನೆಯನ್ನು ಬ್ರೆಕ್ಟ್ ಜನನವಿತ್ತ ಮಗುವಿನ ಒಡತಿ, ಅಪಾಯಗಳಿಗೆ ಎದೆಗುಂದದೆ ಪ್ರೀತಿಯಿಂದ ಸಲಹಿದ ಸಾಕುತಾಯಿಯ ನಡುವಣ ವ್ಯಾಜ್ಯದ ಪ್ರಶ್ನೆಯಾಗಿಸಿದ ಬ್ರೆಕ್ಟ್‌ನ ಪ್ರತಿಭೆ ಉಜ್ವಲವಾದದ್ದು. ಅದೇ ಸಂದರ್ಭದಲ್ಲಿ ಆಳುವ ವರ್ಗ, ಅವರ ಅವಗುಣಗಳು, ನ್ಯಾಯಾಲಯವೂ ಆಳುವ ವರ್ಗದ ಸಾಧನ ಎಂಬ ಅನೇಕ ಸಂಕೀರ್ಣ ಸಂಗತಿಗಳನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಚಿತ್ರಿಸಲಾದ ನಾಟಕ ಇದು

ಈ ನಾಟಕದ ಮೊದಲರ್ಧದಲ್ಲಿ ಚಿತ್ರಿತವಾಗುವ ಸಾಮ್ರಾಜ್ಯವೊಂದರ ಅರಾಜಕತೆ ನಟರ, ನಿರ್ವಹಣೆಯ ಅರಾಜಕತೆಯಿಂದ ಗೊಂದಲಮಯವಾದರೂ ಮೇಳದ ಅತಿವಾಚಾಳಿತನ ಪ್ರೇಕ್ಷಕರನು ದೃಶ್ಯಗಳನ್ನು ಅರ್ಥಮಾಡಿಕೊಳ್ಳಲಾರದ ಮೂರ್ಖರೆಂದು ಗಣಿಸಿದಂತೆ ಕಂಡುಬಂದರೂ ಸಾಕು ತಾಯಿ ಗೌರಿಯ ಆಕೆಯ ಪ್ರೇಮಿ ಚನ್ನನ ಪಾತ್ರ ನಿರ್ವಹಣೆ ರಾಣಿ ಜಸೋಮತಿ, ಕುಡುಕ, ಹರಿತವಾದ ನ್ಯಾಯಬುದ್ಧಿಯ ಅಲಾಮನ ಅಭಿನಯ ಕೆಲವು ದೃಶ್ಯಗಳ ಉತ್ತಮ ದೃಶ್ಯ ಸಂಯೋಜನೆಯಿಂದ ಮೆಚ್ಚುಗೆಗೆಪಾತ್ರವಾಯಿತು

ಆನಂದಕಂದ (ಬೆಟಗೇರಿ ಕೃಷ್ಣಶರ್ಮ)ರ ಜಾನಪದ ವಸ್ತು ಆಧಾರಿತವಾದ ಕಥೆಯನ್ನು ಆದರಿಸಿ ಎಸ್. ಹಿರೇಮಠರು ರಚಿಸಿದ ನಾಟಕ (ಜೋಗತಿ ಕಲ್ಲು) ಶತ ಶತಮಾನಗಳ ಗೊಡ್ಡು ಸಂಪ್ರದಾಯದ ಕಟ್ಟು ಕಟ್ಟಳೆಗಳ ಮುಷ್ಟಿಯಲ್ಲಿ ಸಿಲುಕಿ ಎಲ್ಲರಂತೆ ತನಗೆ ಪ್ರಿಯವಾದ ರೀತಿಯಲ್ಲಿ ಮದುವೆಯಾಗಿ ಬದುಕಲಾರದೆ ಜೋಗತಿಯ ಮಗಳು ಆಹುತಿಯಾದಕಥೆ ಈ ನಾಟಕ ಚಂದಕ್ಕನ, ಪೂಜಾರಿಯ ಹುಲಿಗನ ಅಭಿನಯದಿಂದ ಕೂಡಿದ್ದರೂ ಮೇಳ ಅತ್ಯುತ್ತಮವಾಗಿದ್ದರೂ ಒಂದಕ್ಕೊಂದು ಬೆರೆಯದ ಮೇಳವೇ ಪ್ರಧಾನವಾಗಿ ನಾಟಕ ಮರೆಯಾಯಿತು,

ಈ ಎಲ್ಲ ನಾಟಕಗಳ ನಿರ್ದೇಶಕರ ಬಗ್ಗೆ ಪ್ರತ್ಯೇಕವಾಗಿ ಹೇಳಲೇಬೇಕು. ತುಳಿತಕ್ಕೊಳಗಾದ ಜನರ ನಡುವೆ ಹುಟ್ಟಿ ಬೆಳೆದು ಸಮುದಾಯದಿಂದ ಬೆಳಕಿಗೆ ಬಂದು ಕಲೆಯ ಮೂಲಕ ಜನರ ಪ್ರಜ್ಞೆಯನ್ನು ಅರಳಿಸುವ ಕ್ರಿಯೆಗೆ ತೆತ್ತುಕೊಂಡ ಸಿ. ಬಸವಲಿಂಗಯ್ಯ, ಕಲಾಕ್ಷೇತ್ರ ಕೇಂದ್ರಿತ ಪ್ರಜ್ಞೆಯ ರಂಗಕರ್ಮಿಗಳಲ್ಲೊಬ್ಬರಾಗದೆ, ಯಜಮಾನ ಸಂಸ್ಕೃತಿಯ ಅಟ್ಟಹಾಸದ ನಡುವೆ ಆಳದಲ್ಲಿ ಹುದುಗಿಹೋಗಿರುವ ಜನರ ನೋವನ್ನು ನಾಟಕವಾಗಿಸುವ ಕೌಶಲ್ಯವನ್ನು ಜನ ತಲೆದೂಗುವಂತೆ ಪ್ರದರ್ಶಿಸಿದ್ದಾರೆ. ನಿರ್ದೇಶನಕ್ಕೆ ಹೊಸದಾಗಿ ಕೈಹಾಕಿರುವ ಇವರು ಇಷ್ಟಕ್ಕೇ ತೃಪ್ತರಾಗದೆ ಬೆಳೆಯಲಿ ರಂಗಮಾಧ್ಯಮದ ಮೇಲಿನ ಹಿಡಿತ ಮತ್ತಷ್ಟು ದೃಢವಾಗಲಿ ಎಂದು ಹಾರೈಸುತ್ತೇವೆ.

ಜಿ. ಎನ್. ನಾಗರಾಜ್

(7ನೇ ಪುಟದಿಂದ)

ಶಾಲಾ ಹಂತದಲ್ಲಿ "ಮಾದರಿ ಶಾಲೆ"ಯನ್ನು ಸೂಚಿಸಿದಂತೆ ವಿಶ್ವವಿದ್ಯಾಲಯ ಹಂತದಲ್ಲಿ ಉತ್ಕೃಷ್ಟತೆಯ ಕೇಂದ್ರಗಳನ್ನು ಸ್ಥಾಪಿಸುವ ಮತ್ತು ಬಲಪಡಿಸುವ ಸಲಹೆಯನ್ನು ದಾಖಲೆ ಪತ್ರವು ನೀಡುತ್ತದೆ. ಶ್ರೇಷ್ಠತೆಯ ಸೃಷ್ಟಿಗೆ ಎಸ್.ಎಫ್.ಐ. ಖಂಡಿತ ವಿರೋಧಿಸುವುದಿಲ್ಲವಾದರೂ ಈ ಸಾಧನೆಯು ಬಹುಸಂಖ್ಯಾತ ವಿದ್ಯಾರ್ಥಿಗಳ ವೆಚ್ಚದಿಂದಾಗಬಾರದು. ಉತ್ಕೃಷ್ಟತೆಯ ಕೇಂದ್ರಗಳನ್ನು ಉತ್ತೇಜಿಸಬೇಕಾದರೆ ಉನ್ನತ ಶಿಕ್ಷಣದ ಯಾವುದೇ ರೀತಿಯ ವಿಸ್ತರಣೆಯನ್ನು ಮಿತಗೊಳಿಸುವುದು ಮತ್ತು ಸ್ಥಂಭನಗೊಳಿಸಬೇಕಾಗುವುದು (ಪ್ಯಾರಾ 4 123)

ಈ ಉತ್ಕೃಷ್ಟತೆಯ ಶಿಬಿರಗಳನ್ನೇರಲು ಸಾಧ್ಯವಾಗದ ಮಿಲಿಯಾಂತರ ಜನರಿಗೆ ದಾಖಲೆ ಪತ್ರವು "ಮುಕ್ತ ವಿಶ್ವವಿದ್ಯಾಲಯಗಳ" ಪದ್ಧತಿಯನ್ನು ಸೂಚಿಸುತ್ತದೆ. ಆರ್ಥಿಕ ಅಥವಾ ಮತ್ತಿತರೆ ಕಾರಣಗಳಿಂದಾಗಿ ಔಪಚಾರಿಕ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಿರದ ಜನರಿಗೆ ಇದೊಂದು ವರದಾನವಾಗಲಿದೆ. (ಪ್ಯಾರಾ 4.21)

ಆದ್ದರಿಂದ ದಾಖಲೆ ಪತ್ರವು ಗುಣಮಟ್ಟದ ಬಗ್ಗೆ ಒತ್ತಿ ಹೇಳುವಾಗ ಕೆಲವೇ ಜನರಿಗೆ ಸೀಮಿತವಾಗಿ ಹೇಳುವುದಲ್ಲದೆ ಮಾದರಿ ಶಾಲೆ ಮತ್ತು ಉತ್ಕೃಷ್ಟತೆಯ ಕೇಂದ್ರಗಳಿಂದ ಹೊರಗುಳಿಯುವ ಅಸಂಖ್ಯಾತ ಜನರಿಗೆ ಸಂಬಂಧಿಸಿರುವುದಿಲ್ಲ. ಅವರೆಲ್ಲರೂ ಕೇವಲ ಪ್ರಮಾಣದ ಲೆಕ್ಕದಲ್ಲಿ ಸಾಮೂಹಿಕವಾಗಿ ದಾಖಲಾಗಬೇಕಾಗುವುದು

17 ರಿಂದ 23 ವರ್ಷ ವಯೋಗುಂಪಿನ ಜನಸಂಖ್ಯೆಯ ಕೇವಲ 4.8 ರಷ್ಟು ಮಂದಿ ಯಾವುದೇ ರೀತಿಯ ಉನ್ನತ ಶಿಕ್ಷಣದಲ್ಲಿ ತೊಡಗಿರುವಾಗ ಇಂತಹ ಪ್ರತಿಗಾಮಿ ಶಿಫಾರಸ್ಸುಗಳನ್ನು ಮಾಡಲಾಗಿದೆ ಕಾಲೇಜುಗಳಲ್ಲಿನ ವಿದ್ಯಾರ್ಥಿಸಂಖ್ಯೆಯು ಸ್ವಾತಂತ್ರ್ಯಾನಂತರದಲ್ಲಿ 18 ಪಟ್ಟು ಹೆಚ್ಚಾಗಿರುವುದಾದರೂ ಈ ವಯೋಗುಂಪಿನ ಶೇ 95.2 ರಷ್ಟು ಮಂದಿ ಕಾಲೇಜು ಶಿಕ್ಷಣದಿಂದ ಹೊರಗುಳಿದಿದ್ದಾರೆ. ಇದನ್ನು ಯಾವುದೇ ದೇಶದ ಅಂಕಿ ಅಂಶಗಳೊಂದಿಗಾದರೂ ಹೋಲಿಸಿ ನೋಡಿ. ಉದಾ. ಫಿಲಿಪೈನ್ಸ್‌ನಲ್ಲಿ ಶೇ 25, ದಕ್ಷಿಣ ಕೊರಿಯದಲ್ಲಿ ಶೇ. 18ರಷ್ಟು ಮತ್ತು ಜಪಾನ್‌ನಲ್ಲಿ ಶೇ. 30ರಷ್ಟು ಮಂದಿ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ.

ಉನ್ನತ ಶಿಕ್ಷಣವನ್ನು ನಮ್ಮ ದೇಶದಲ್ಲಿಯು ಕೆಲವೇ ಮಂದಿಗೆ ಸೀಮಿತಗೊಳಿಸುವ ಈ ಪ್ರಯತ್ನಗಳನ್ನು ಎಸ್.ಎಫ್.ಐ. ದೃಢವಾಗಿ ವಿರೋಧಿಸುವುದಲ್ಲದೆ ಈ ಧೋರಣೆಯನ್ನು ಸಂಪೂರ್ಣವಾಗಿ ಬದಲಾಯಿಸಿ ಉನ್ನತ ಶಿಕ್ಷಣವನ್ನು ವಿಸ್ತರಿಸುವಂತೆ ಒತ್ತಾಯಿಸುತ್ತದೆ

(ಮುಂದುವರಿಯುವುದು)

ಎಸ್. ಎಫ್. ಐ. ನ ದ.ಕ. ಸಮ್ಮೇಳನ ಉಡುಪಿಯಲ್ಲಿ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ ಎಫ್ ಐ) ನಾಲ್ಕನೇ ದ.ಕ. ಜಿಲ್ಲಾ ಸಮ್ಮೇಳನವನ್ನು ಜನವರಿ 26, 27, 1986 ರಂದು ಉಡುಪಿಯಲ್ಲಿ ನಡೆಸಲು ತಾರೀಕು. 25.12.85 ರಂದು ಉಡುಪಿಯಲ್ಲಿ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ವಿಶ್ವನಾಥ ರವರ ಅಧ್ಯಕ್ಷತೆಯಲ್ಲಿ ಸೇರಿದ ಎಸ್.ಎಫ್.ಐ. ದ.ಕ. ಜಿಲ್ಲಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು. ಸಮ್ಮೇಳನವನ್ನು ಯಶಸ್ವಿಗೊಳಿಸಲು ತಾರೀಕು. 29.12.85 ರಂದು ಉಡುಪಿಯ ಸರಕಾರಿ ನೌಕರರ ಸಂಘದ ಹಾಲ್‌ನಲ್ಲಿ ಅನೇಕ ಪ್ರಗತಿಪರ ಸಂಘಟನೆಗಳು ಸಭೆ ಸೇರಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಪ್ರಗತಿಪರ ಲೇಖಕರಾದ ಡಾ. ಆರ್.ಕೆ ಮಣಿಪಾಲ್ ಹಾಗೂ ಕಾರ್ಯದರ್ಶಿಯಾಗಿ ರತ್ನಾಕರನ್ ರವರನ್ನು ಆಯ್ಕೆ ಮಾಡಲಾಯಿತು. 1986 ಜನವರಿ 26 ರಂದು, ಈ ಸಮ್ಮೇಳನವನ್ನು ಮಂಗಳೂರು ವಿಶ್ವವಿದ್ಯಾನಿಲಯದ ರಾಜಕೀಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊಫೆಸರ್ ಡಾ. ಕೆ ರಾಘವೇಂದ್ರರಾವ್‌ರವರು, ಉದ್ಘಾಟಿಸಲಿದ್ದಾರೆ.

ಸಂಪನ್ಮೂಲಗಳ ಅಭಾವ

[5ನೇ ಪುಟದಿಂದ]

ಈ ವಿಧಾನದಿಂದ, ಕೇಂದ್ರ ಸರ್ಕಾರದ ಕ್ಷೇತ್ರಕ್ಕೆ ಸಿಗುವ ಸಂಪನ್ಮೂಲದಲ್ಲಿ ರಾಜ್ಯ ಸರ್ಕಾರಗಳಿಗೆ ಪಾಲು ದೊರೆಯುವುದಿಲ್ಲ. ಪರಿಣಾಮವಾಗಿ ರಾಜ್ಯ ಸರಕಾರಗಳು ಸಂಪನ್ಮೂಲ ಕೊರತೆಯನ್ನು ಹೆಚ್ಚು ಅನುಭವಿಸಬೇಕಾಗುವುದು. ಸಾರ್ವಜನಿಕ ರಂಗದ ಉಕ್ಕು ಕಲ್ಲಿದ್ದಲು, ತೈಲ, ಸಾರಿಗೆ-ಸಂಪರ್ಕ, ವಿದ್ಯುತ್, ನೀರಾವರಿ, ಗೊಬ್ಬರ, ಇತ್ಯಾದಿಗಳ ದರಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಏರಿಸುತ್ತಾ ಹೋಗುವುದರಿಂದ ಬೆಲೆ ಏರಿಕೆ ಹಣದುಬ್ಬರ ಹೆಚ್ಚಿ ಯೋಜನಾ ವೆಚ್ಚವೇ ಹೆಚ್ಚುವುದು. ಸಂಪನ್ಮೂಲ ಸಂಗ್ರಹಣೆ ಇನ್ನಷ್ಟು ದುಃಸ್ಥಿತಿಗೊಳಗಾಗುವುದು. ಯೋಜನೆಯ ಗುರಿ ಧೋರಣೆಗಳು ಅಂತಿಮವಾಗಿ ವಿಫಲಗೊಳ್ಳುವುವು. ಈ ವಿಧಾನ, ಘಾಯಗೊಂಡ ಹುಲಿ ತನ್ನ ದೇಹದ ಭಾಗವನ್ನೇ ಕಡಿದು ಘಾಯ ಮುಚ್ಚಿಕೊಂಡಂತೆ !

ತೆರಿಗೆ ಸಂಗ್ರಹ

ಸಾರ್ವಜನಿಕ ರಂಗದ ಲಾಭ ಗಳಿಕೆ ಮತ್ತು ಹೆಚ್ಚಿನ ತೆರಿಗೆಗಳ ಮೂಲಕ ಏಳನೇ ಯೋಜನೆಗೆ ಒಟ್ಟು ರೂ 46,700 ಕೋಟಿ ಸಂಪನ್ಮೂಲ ಸಂಗ್ರಹಿಸಬೇಕೆಂದು ಅಂದಾಜು ಮಾಡಲಾಗಿದೆ. ಕೇಂದ್ರದ ಪಾಲು ರೂ 10000 ಕೋಟಿ, ರಾಜ್ಯಗಳ ಪಾಲು ರೂ. 36,700 ಕೋಟಿ. ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆಗಳ ಒಟ್ಟು ಸಂಗ್ರಹ 1984-85 ರಲ್ಲಿ ರಾಷ್ಟ್ರೀಯ ಆದಾಯದ ಶೇ 16.6 ದಷ್ಟಿದ್ದು ಹೊಸ ಯೋಜನೆಯ ಕೊನೆಯ ವರ್ಷದಲ್ಲಿ (1989-90) ಶೇ 19 ಕ್ಕೆ ಏರಿಸುವ ಗುರಿ ಇದೆ. ಈ ಗುರಿಯನ್ನು ಸಾಧಿಸುವುದೂ ಅಸಾಧ್ಯ. ಒಟ್ಟು ತೆರಿಗೆ ಸಂಗ್ರಹದಲ್ಲಿ ವೈಯಕ್ತಿಕ ಆದಾಯ ಹಾಗೂ ಸಂಪತ್ತು, ಮತ್ತು ಕೈಗಾರಿಕೋದ್ಯಮಗಳ ಆದಾಯ ತೆರಿಗೆಗಳ ಪಾಲು ವರ್ಷ ವರ್ಷಕ್ಕೂ ಕಡಿಮೆಯಾಗುತ್ತಿದೆ (1952-55 : 41.1%; 1984-85 : 14.3%) ಜನರ ಜೀವನಾವಶ್ಯಕ ವಸ್ತುಗಳ ಮೇಲಿನ ಮತ್ತು ಕೃಷಿ-ಕೈಗಾರಿಕೋದ್ಯಮಗಳಿಗೆ ಅಗತ್ಯವಾದ ವಸ್ತುಗಳ ಮೇಲಿನ ಮಾರಾಟ, ಅಬಕಾರಿ ಸುಂಕ, ಇತ್ಯಾದಿ ಅನೇಕ ಅಪ್ರತ್ಯಕ್ಷ ತೆರಿಗೆಗಳ ಪಾಲು ಹೆಚ್ಚುತ್ತಿದೆ (1952-55 : 59.9%; 1984-85 : 85.7%) 1973-74ರಲ್ಲಿಯೇ ತೆರಿಗೆ ವಿಚಾರಣಾ ಆಯೋಗದ ವರದಿಯಂತೆ, ಶೇ 55 ರಷ್ಟು ಅಪ್ರತ್ಯಕ್ಷ ತೆರಿಗೆಯ ಭಾರವು ಮಾಸಿಕ ರೂ 100 ಕ್ಕಿಂತಲೂ ಕಡಿಮೆ ಆದಾಯವಿರುವ ಬಡ ಕುಟುಂಬಗಳ ಮೇಲೆಯೇ ಬಿದ್ದಿತ್ತು. ಕಳೆದ ದಶಕದಲ್ಲಿ ಅಪ್ರತ್ಯಕ್ಷ ತೆರಿಗೆಯ ಪಾಲು ಇನ್ನಷ್ಟು ಹೆಚ್ಚಿರುವುದರಿಂದ, ಬಡ ಕುಟುಂಬಗಳ ಮೇಲಿನ ಕರಭಾರವೂ ಬೆನ್ನು ಮುರಿಯುವಷ್ಟು ಹೆಚ್ಚಿದೆ.

ಆದರೂ, ಹೊಸ ಯೋಜನೆಯು ಸಂಪನ್ಮೂಲ ಸಂಗ್ರಹಿಸಲು ಸಾರ್ವಜನಿಕ ರಂಗದ ಉತ್ಪಾದನೆಗಳ ಬೆಲೆಗಳನ್ನು ಹೆಚ್ಚಿಸುವುದರೊಂದಿಗೇ, ಅಪ್ರತ್ಯಕ್ಷ ತೆರಿಗೆಯನ್ನೇ ಹೆಚ್ಚು ಅವಲಂಬಿಸುತ್ತದೆ. ಯೋಜನೆಯ ಮೊದಲವರ್ಷದಲ್ಲಿಯೇ, ಕೆಲವು ಪ್ರತ್ಯಕ್ಷ ತೆರಿಗೆಗಳನ್ನು ರದ್ದು ಮಾಡಿ, ಇತರ ಪ್ರತ್ಯಕ್ಷ ತೆರಿಗೆಗಳನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ದೀರ್ಘ ಕಾಲದ ಹಣಕಾಸು ಧೋರಣೆಯ ನೆಪದಲ್ಲಿ, ಯೋಜನೆಯ ಅವಧಿಯಲ್ಲಿ ವೈಯಕ್ತಿಕ ಆದಾಯ-ಸಂಪತ್ತು ತೆರಿಗೆಗಳಲ್ಲಾಗಲೀ, ಕಂಪೆನಿಗಳ ಆದಾಯ ತೆರಿಗೆಗಳಲ್ಲಾಗಲೀ ಹೆಚ್ಚಳ ಇಲ್ಲ ಎಂದು ವಿತ್ತ ಮಂತ್ರಿ ವಿ. ಪಿ ಸಿಂಘ್ ಈಗಾಗಲೇ ಘೋಷಿಸಿದ್ದಾರೆ. ಶ್ರೀಮಂತ ರೈತರ ಮತ್ತು ಭೂ ಮಾಲಕರ ಕೃಷಿ ಮೂಲ ಆದಾಯಕ್ಕೂ ತೆರಿಗೆ ವಿಧಿಸುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಅಂದರೆ ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲ ಒದಗಿಸುವುದು ಬಡವರ ಹೊಟ್ಟೆಗೆ ಹೊಡೆದು ! ಅದರ ಪ್ರತಿಫಲವಾಗಿ ಹೆಚ್ಚಿದ ಆದಾಯ-ಸಂಪತ್ತು ಶ್ರೀಮಂತ ವ್ಯಕ್ತಿಗಳಿಗೂ ಅವರು ನಿಯಂತ್ರಿಸುತ್ತಿರುವ ಕೃಷಿ - ವ್ಯಾಪಾರ – ಕೈಗಾರಿಕೋದ್ಯಮಗಳಿಗೂ ಸ್ವೇಚ್ಛೆಯಿಂದ ಬಳಸಿಕೊಳ್ಳಲು ಬಿಡುವುದು !

ಇವರ ಸ್ವಾಧೀನದಲ್ಲಿ ರೂ 35000 ಕೋಟಿಯಿಂದ ರೂ 70000 ಕೋಟಿಯಷ್ಟು ಕಪ್ಪು ಹಣ ಇರುವುದೆಂದು ವಿವಿಧ ಅಧ್ಯಯನಗಳು ತಿಳಿಸಿವೆ. ಆದರೆ, ಕಪ್ಪು ಹಣವನ್ನು ಹೇಗಾದರೂ ಬಿಳಿ ಮಾಡಿ ಖಾಸಗೀ ರಂಗಕ್ಕೆ ಬಳಸಲು ಪ್ರೋತ್ಸಾಹಿಸಲಾಗುತ್ತಿದೆಯೇ ಹೊರತು, ಅದನ್ನು ಮುಟ್ಟುಗೋಲು ಹಾಕಿ ಅಥವಾ ಅದರ ಮೇಲೆ ಏರಿಕೆಯ ತೆರಿಗೆಯನ್ನಾದರೂ ವಿಧಿಸಿ ಸಾರ್ವಜನಿಕ ರಂಗದ ಯೋಜನಾ ವೆಚ್ಚ ಸಂಪನ್ಮೂಲ ಒದಗಿಸುವತ್ತ ಸರಕಾರ ಕಾರ್ಯನಿರತವಾಗಿಲ್ಲ. ನೆಹರು ಮನೆತನದಿಂದ "ವರದಾನ"ವಾಗಿ ಬಂದ ನಮ್ಮ ದೇಶದ ಪಂಚವಾರ್ಷಿಕ ಯೋಜನೆ ಇದಾಗಿದೆ !

ಕೊರತೆ ಹಣ ಸೃಷ್ಟಿ

ಯೋಜನೆಯ ಒಟ್ಟು ಮೊತ್ತದಲ್ಲಿ, ರೂ 180,000 ಕೋಟಿ ಸಾರ್ವಜನಿಕ ರಂಗಕ್ಕೆಂದು ನಿರ್ಧರಿಸಲಾಗಿದೆ. ಈ ಕ್ಷೇತ್ರಕ್ಕೆ ಬೇಕಾದ ಸಂಪನ್ಮೂಲ ಸಂಗ್ರಹಣೆಯಲ್ಲಿ ವಿದೇಶಿ ನೆರವು, ಸಾರ್ವಜನಿಕ ರಂಗದ ಲಾಭ ಗಳಿಕೆ, ತೆರಿಗೆ ಸಂಗ್ರಹಗಳ ಅನಿಶ್ಚಿತೆಗಳೊಂದಿಗೆ, ನಿವ್ವಳ ರೂ 40000 ಕೋಟಿ ಕೊರತೆಯ ಅನಿಶ್ಚಿತೆಯೂ ಸೇರಿದೆ. ಆದರೆ, ಇನ್ನಷ್ಟು ಹೆಚ್ಚಿನ ದರಗಳಲ್ಲಿ ವಿದೇಶಿ ನೆರವು, ರಾಷ್ಟ್ರೀಯ ಉಳಿತಾಯ, ತೆರಿಗೆ ಸಂಗ್ರಹ ಸಿಗುವುದರಿಂದ ಕೊರತೆಯು ರೂ 14000 ಕೋಟಿಗೆ ಇಳಿಯಬಹುದೆಂದು ನಿರೀಕ್ಷಿಸಲಾಗಿದೆ. ಹಿಂದಿನ ಅನುಭವಗಳಿಂದ ಈ ನಿರೀಕ್ಷೆ ನಿಜವಾಗುವುದು ಅಸಂಭವ. ಕಳೆದ 38 ವರ್ಷಗಳಲ್ಲಿ ವಾರ್ಷಿಕ ಸರಾಸರಿ ಕೊರತೆ ಹಣ ಸೃಷ್ಟಿ ವಿಪರೀತವಾಗಿ ಏರುತ್ತಾ ಬಂದಿದೆ. ಇಳಿಮುಖವಾಗಲೇ ಇಲ್ಲ. ಏಳನೇ ಯೋಜನೆಯ ಮೊದಲ ವರ್ಷದಲ್ಲಿಯೇ 1985-86 ರ ಕೇಂದ್ರ ಮುಂಗಡ ಪತ್ರದಲ್ಲಿ ರೂ 3000 ಕೋಟಿ ಕೊರತೆ ಎಂದು ಕಾಣಿಸಲಾಗಿತ್ತು. ಆದರೆ, ಆರು ತಿಂಗಳಲ್ಲಿಯೇ ಮಳೆಗಾಲದ ಸಂಸತ್ ಅಧಿವೇಶನದಲ್ಲಿ ಸಪ್ಲಿಮೆಂಟರಿ ಬೇಡಿಕೆಗಳನ್ನು ಮಂಡಿಸುವಾಗ ರೂ 3000 ಕೋಟಿ ಕೊರತೆ ತೋರಿಸಲಾಗಿದೆ. ವರ್ಷಾಂತ್ಯದಲ್ಲಿ ಕೊರತೆ ರೂ 6000 ಕೋಟಿಗೂ ಮೀರಬಹುದು. ಐದು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ಒಟ್ಟು ಕೊರತೆ ರೂ 40000 ಕೋಟಿಗೂ ಮೀರುವ ಸಂಭವವಿದೆ. ವಿದೇಶಿ ನೆರವು, ರಫ್ತು ಗಳಿಕೆ, ಸಾರ್ವಜನಿಕ ರಂಗದ ಲಾಭ ಗಳಿಕೆ, ತೆರಿಗೆ ಸಂಗ್ರಹ, ಮೂಲಗಳಿಂದ ನಿರೀಕ್ಷಿಸಿದ ಸಂಪನ್ಮೂಲಗಳ ಸಂಗ್ರಹವಾಗದಿದ್ದರೆ. ಕೊರತೆ ಹಣ ಸೃಷ್ಟಿಯ ಸುಲಭ ಮಾರ್ಗವನ್ನು ಹಿಡಿಯುವುದು ಅನಿವಾರ್ಯ. ಆಗ ಬೆಲೆ ಏರಿಕೆ – ಹಣದುಬ್ಬರ, ಯೋಜನಾ ವೆಚ್ಚದ ಏರಿಕೆಯಂತಹ ವಿಷವರ್ತುಲ ಉಂಟಾಗುವುದು ! ಅಥವಾ, ಯೋಜನೆಯ ಗಾತ್ರವನ್ನೇ ಇನ್ನಷ್ಟು ಕಡಿತಗೊಳಿಸಿ ಯೋಜನೆಗೇ ವಿರಾಮ ಹಾಕಬಹುದು !

ಪರ್ಯಾಯ ಮಾರ್ಗ

ಸಡಿಲ ಆಮದು ನೀತಿ, ರಫ್ತು ಪ್ರೋತ್ಸಾಹ, ವಿದೇಶಿ ನೆರವು, ಹೆಚ್ಚು ಅಪ್ರತ್ಯಕ್ಷ ತೆರಿಗೆ, ಭೋಗ ವಸ್ತುಗಳ ಆಂತರಿಕ ಮಾರುಕಟ್ಟೆ, ಖಾಸಗೀ ರಂಗದ ಮೇಲುಗೈ, ಇತ್ಯಾದಿ ಮಾರ್ಗಗಳನ್ನು ಬಂಡವಾಳಶಾಹಿ ಜಗತ್ತಿನ ತೀವ್ರ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಒತ್ತಾಯಿಸುತ್ತಿವೆ. ಇಂತಹ ಮಾರ್ಗಗಳು ಕ್ರಮೇಣ ಆರ್ಥಿಕ ಯೋಜನೆಗೇ ವಿರಾಮ ಕೊಡುತ್ತವೆ. ವಿದೇಶಿ ವಸ್ತು ಸ್ವದೇಶಿ ಬಂಡವಾಳಕ್ಕೆ ಮುಕ್ತದ್ವಾರ ತೆರೆಯುತ್ತವೆ. ಆದುದರಿಂದ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಾವಲಂಬನೆಯನ್ನು ಉಳಿಸಿಕೊಳ್ಳಲು, ಸಾರ್ವಜನಿಕ ಕ್ಷೇತ್ರಕ್ಕೆ ಸಂಪನ್ಮೂಲ ಒದಗಿಸಲು ಪರ್ಯಾಯ ಮಾರ್ಗವನ್ನವಲಂಬಿಸಬೇಕಾಗಿದೆ. ಮುಖ್ಯವಾಗಿ :

1 ದೀರ್ಘ ಕಾಲದ ಅಥವಾ ಅಲ್ಪ ಕಾಲದ ಹಣಕಾಸು ಧೋರಣೆಯು ಆರ್ಥಿಕ ಅಭಿವೃದ್ಧಿ ಯೋಜನೆಗೆ ಪೂರಕವಾಗಿರಬೇಕು. ಸಂಪನ್ಮೂಲಗಳ ಅನಿಶ್ಚಿತೆಗಳನ್ನು ಹೋಗಲಾಡಿಸುವ ಪ್ರಬಲ ಅಸ್ತ್ರವಾಗಿರಬೇಕು.

2. ಯೋಜನಾ ವೆಚ್ಚಕ್ಕೆ ಸಂಪನ್ಮೂಲವನ್ನು ಹೆಚ್ಚಾಗಿ ಆದಾಯ ಮತ್ತು ಆಸ್ತಿಗಳ ಮೇಲಿನ ಪ್ರತ್ಯಕ್ಷ ತೆರಿಗೆಗಳ ಮೂಲಕ ಪಡೆಯಬೇಕು. ಈ ದಿಸೆಯಲ್ಲಿ ಶ್ರೀಮಂತ ರೈತರ ಹಾಗೂ ಭೂ ಮಾಲಕರ ಕೃಷಿ ಮೂಲ ಆದಾಯ ಮತ್ತು ಆಸ್ತಿಗಳ ಮೇಲೆಯೂ ಪ್ರತ್ಯಕ್ಷ ತೆರಿಗೆ ವಿಧಿಸಬೇಕು. ಕಪ್ಪು ಹಣವನ್ನು ನಿರ್ದಾಕ್ಷಿಣ್ಯವಾಗಿ ಮುಟ್ಟುಗೋಲು ಹಾಕಬೇಕು. ತೆರಿಗೆ ತಪ್ಪಿಸುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು

3. ಅಪ್ರತ್ಯಕ್ಷ ತೆರಿಗೆ, ಕೊರತೆ ಹಣ ಸೃಷ್ಟಿ, ಸಾರ್ವಜನಿಕ ಕ್ಷೇತ್ರದ ಉತ್ಪಾದನಾ ವಸ್ತುಗಳ ಬೆಲೆ ಏರಿಕೆ, ವಿದೇಶಿ ನೆರವು ಮಾರ್ಗಗಳನ್ನು ಕ್ರಮೇಣ ಕೈ ಬಿಡಬೇಕು.

4. ಸರಕಾರದ ಅನವಶ್ಯಕ ವೆಚ್ಚಗಳನ್ನು (ಉದಾಹರಣೆಗೆ : ಏಷ್ಯಾಡ್) ತೀವ್ರವಾಗಿ ಕಡಿತ ಗೊಳಿಸಬೇಕು. ಸಾರ್ವಜನಿಕ ಕೈಗಾರಿಕೋದ್ಯಮಗಳ ಆಡಳಿತದಲ್ಲಿ ಕಾರ್ಮಿಕರು ಸಕ್ರಿಯವಾಗಿ ಪಾತ್ರ ವಹಿಸಲು ಅವಕಾಶವಿರಬೇಕು. ಆಗ ಅವುಗಳ ದಕ್ಷತೆ ಹೆಚ್ಚಿ ನಷ್ಟ ನಿವಾರಣೆಯಾಗುವುದು, ಲಾಭ ಗಳಿಕೆ ಸಾಧ್ಯವಾಗುವುದು.

5 ಸರಕಾರದ ಸಂಗ್ರಹಾಲಯಗಳಲ್ಲಿ ಈಗ ಕೊಳೆತು ಹಾಳಾಗುತ್ತಿರುವ 30 ಮಿ. ಟನ್ ಆಹಾರ ಧಾನ್ಯಗಳ ಸ್ವಲ್ಪಾಂಶವನ್ನಾದರೂ "ಕೆಲಸಕ್ಕೆ ಕಾಳು" ಯೋಜನೆಗೆ ಸಂಪನ್ಮೂಲವಾಗಿ ಬಳಸಬೇಕು

(ಮುಂದುವರಿಯುವುದು)

ಅನಕ್ಷರತೆ ಮತ್ತು ನಿರುದ್ಯೋಗವನ್ನು ಹೆಚ್ಚಿಸುವ ವ್ಯೂಹ

[5ನೇ ಪುಟದಿಂದ]

ಹೆಚ್ಚು ಮಂದಿ ಬಡತನದ ರೇಖೆಗಿಂತ ಕೆಳಗಿರುವ ನಮ್ಮ ಜನತೆಯನ್ನು ಆರ್ಥಿಕವಾಗಿ ವಿಮೋಚನೆ ಗೊಳಿಸುವತ್ತ ಅದೇ ರೀತಿಯ ನಿರ್ಲಕ್ಷ್ಯ ಭಾವನೆಯನ್ನು ವ್ಯಕ್ತಪಡಿಸುತ್ತದೆ

ಉನ್ನತ ಶಿಕ್ಷಣ

ಉನ್ನತ ಶಿಕ್ಷಣದ ಸಮಸ್ಯೆಯನ್ನು ದಾಖಲೆ ಪತ್ರವು ಚಿತ್ರಿಸಿರುವ ಶೈಲಿಯನ್ನು ಕಂಡು ಎಸ್ ಎಫ್ ಐ ದಿಗ್ಭ್ರಮೆ ವ್ಯಕ್ತಪಡಿಸಿದೆ. ಸಮಸ್ಯೆಯೆಂದರೆ ಸಮಾನಾವಕಾಶ ಮತ್ತು ಸೌಲಭ್ಯವನ್ನು ಕಲ್ಪಿಸುವುದಲ್ಲ ಆದರೆ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗುವವರನ್ನು ಉತ್ಪಾದಿಸಲು ಲಭ್ಯವಿರುವ ಅಲ್ಪ ಸಂಪನ್ಮೂಲಗಳ ಪೋಲನ್ನು ತಡೆಗಟ್ಟುವುದಾಗಿದೆ. ಸಂವಿಧಾನದಲ್ಲಿ ಖಾತರಿಪಡಿಸಲಾಗಿರುವ ಸಮಾನಾವಕಾಶ ಮತ್ತು ಹಕ್ಕುಗಳು ಉನ್ನತ ಶಿಕ್ಷಣಕ್ಕೆ ಅನ್ವಯಿಸುವುದಿಲ್ಲವೆಂದು ದಾಖಲೆ ಪತ್ರವು ಒಂದೇ ಬಾರಿಗೆ ನಿರ್ಣಯಿಸಿಬಿಟ್ಟಿದೆ. ಉನ್ನತ ಶಿಕ್ಷಣವನ್ನು ನಿಯಂತ್ರಣ ಗೊಳಿಸುವಲ್ಲಿ ಇದಕ್ಕಿಂತಲೂ ಮಿಗಿಲಾದ ವಾದವಿರಲಲ್ಲುವೇ ?

ಉನ್ನತ ಶಿಕ್ಷಣದ ಗುಣಮಟ್ಟದ ಬಗ್ಗೆ ಬಹಳ ಒತ್ತು ನೀಡಲಾಗಿದ್ದು ಎಸ್. ಎಫ್. ಐ ಸಹ ಈ ಬಗ್ಗೆ ಕಾಳಜಿಯನ್ನು ಹೊಂದಿದ್ದರೂ ಅಂತಹ ಗುಣಮಟ್ಟವನ್ನು ಅದನ್ನು ಕೊಳ್ಳಬಹುದಾದ ಅಥವಾ ಪಡೆಯುವ ಸಾಮರ್ಥ್ಯವುಳ್ಳವರಿಗೆ ಮಾತ್ರವೇ ಒದಗಿಸುವ ಮೂಲಕ ಗುಣಮಟ್ಟವನ್ನು ಪ್ರಮಾಣಕ್ಕೆ ವ್ಯತಿರಿಕ್ತವಾಗಿ ಪ್ರತಿಪಾದಿಸುವುದನ್ನು ನಾವು ವಿರೋಧಿಸುತ್ತೇವೆ. ಶಿಕ್ಷಣವನ್ನು ನಿಯಂತ್ರಿಸುವುದರಿಂದ ಗುಣಮಟ್ಟವನ್ನು ಸಾಧಿಸಲಾಗುವುದಿಲ್ಲವೆಂಬುದನ್ನು ಮುಂದುವರಿದ ದೇಶಗಳ ಅನುಭವವು ತೋರಿಸಿಕೊಡುತ್ತದೆ.

ಸರ್ಕಾರದ ದಾಖಲೆ ಪತ್ರದ ತರ್ಕವನ್ನು 1902 ರಲ್ಲಿ ಬ್ರಿಟಿಷ್ ವಸಾಹತುಶಾಹಿಗಳು ನೇಮಿಸಿದ ಶಿಕ್ಷಣ ಆಯೋಗ ಮಾತುಗಳಲ್ಲಿ ಮತ್ತಷ್ಟು ಚೆನ್ನಾಗಿ ನಿರೂಪಿಸಲಾಗಿದೆ.

"ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲಿ ದಕ್ಷತೆಯನ್ನು ಅತ್ಯಂತ ಪ್ರಮುಖವಾಗಿ ಪರಿಗಣಿಸಬೇಕು. ಕೆಳಮಟ್ಟದ ಪದವಿಗಳನ್ನು ಸೃಷ್ಟಿಸುವ ಅಪೂರ್ಣವಾದ ಶಿಕ್ಷಣ ಕ್ರಮದ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಹಾದು ಹೋಗುವುದಕ್ಕಿಂತ ತುಲನಾತ್ಮಕವಾದ ಸಣ್ಣ ಸಂಖ್ಯೆಯ ಯುವಕರು ಉತ್ತಮವಾದ ಉದಾರ ಶಿಕ್ಷಣವನ್ನು ಪಡೆಯುವುದು ಭಾರತಕ್ಕೆ ಒಳಿತು" (ರ‍್ಯಾಲಿ ಆಯೋಗದ ವರದಿ, 1902, ಪುಟ 14)

ಸ್ವತಂತ್ರ ಭಾರತದ ಇಂದಿನ ಸರ್ಕಾರದ ಮೇಲೆ ಇದಕ್ಕಿಂತಲೂ ನಿಷ್ಕೃಷ್ಟವಾದ ದೋಷಾರೋಪಣೆಯಿರಲು ಸಾಧ್ಯವೇ ? ರ‍್ಯಾಲಿ ಆಯೋಗವು ಲಾರ್ಡ್ ಕರ್ಜನ್ ಏನು ಹೇಳಿದ್ದರೋ ಅದನ್ನೇ ಸ್ಥಿರಗೊಳಿಸಿದೆ. "ನಾವು ಮನಸ್ಸಿನಲ್ಲಿರಿಸಿಕೊಳ್ಳಬೇಕಾಗಿರುವುದು ಗುಣವನ್ನೇ ಹೊರತು ಪ್ರಮಾಣವನ್ನಲ್ಲ"

ಭಾರತೀಯ ವಿಶ್ವ ವಿದ್ಯಾಲಯಗಳಲ್ಲಿ ರಾಷ್ಟ್ರೀಯ ಭಾವನೆಗಳ ಬೆಳವಣಿಗೆಯನ್ನು ತಡೆಗಟ್ಟುವ ನಿರ್ದಿಷ್ಟ ಪ್ರಯತ್ನವಾಗಿ 1902ರ ಆಯೋಗವನ್ನು ನೇಮಿಸಲಾಗಿತ್ತೆಂಬುದನ್ನು ಸಹ ಇಲ್ಲಿ ಗಮನಿಸಬೇಕಾಗಿದೆ. ಸದ್ಯದ ದಾಖಲೆ ಪತ್ರವು ಸಹ ಚಾಚೂ ತಪ್ಪದೆ ಇಂತಹುದೇ ಉದ್ದೇಶಗಳನ್ನು ವ್ಯಕ್ತಪಡಿಸುತ್ತದೆ.

(6ನೇ ಪುಟ ನೋಡಿ)

ರಾಷ್ಟ್ರವ್ಯಾಪಿಯಾಗಿ ಪಕ್ಷ ಬೆಳೆಯಬೇಕು

[1ನೇ ಪುಟದಿಂದ]

ಬಹಿರಂಗ ಸಭೆಯಲ್ಲಾಗಲೀ, ಸಹಾಸ್ರಾರು ಸಂಖ್ಯೆಯಲ್ಲಿ ಸುಮಾರು 1 ವಾರಕಾಲ ಬರುತ್ತಿದ್ದ ಜನ ಸಮೂಹಗಳನ್ನು ನಿಯಂತ್ರಿಸುವುದರಲ್ಲಾಗಲೀ, ಆನಂದ ಮಾರ್ಗಿಗಳು ಬಹಿರಂಗವಾಗಿ "ಸಭೆ ಸಮ್ಮೇಳನ, ಮೆರವಣಿಗೆ" ಯನ್ನು ಕೆಡಿಸುವ ಮತ್ತು ಮಾರ್ಕ್ಸ್‌ವಾದಿ ಮುಖಂಡರ ಕೊಲೆ ನಡೆಸುವ ಬೆದರಿಕೆ ಹಾಕಿದ್ದರೂ, ಅತ್ಯಂತ ಶಾಂತ ರೀತಿಯಲ್ಲಿ ಅಧಿವೇಶನವು ನಡೆಯಿತು ಬೊಂಬ್ಬಾಯಲ್ಲಿ ಕಾಂಗ್ರೆಸ್ಸ್ ಪಕ್ಷದ ಶತಾಬ್ಧಿ ಆಚರಣೆ ನಡೆದ ರೀತಿಯನ್ನು ಇಲ್ಲಿ ಹೋಲಿಸಿದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎಷ್ಟೊಂದು ಶಿಸ್ತುಬದ್ಧವಾದ ಪಕ್ಷವೆಂಬುದರ ಅರಿವು ಉಂಟಾಗುವುದು

ಗಂಭೀರವಾದ ಚರ್ಚೆ

2500 ಕ್ಕೂ ಅಧಿಕ ತಿದ್ದುಪಡಿಗಳಿದ್ದರೂ ಅಧಿವೇಶನದಲ್ಲಿ ಚರ್ಚೆ ಅತ್ಯಂತ ವ್ಯಾಪಾರಿಕವಾಗಿ (ಬಿಸಿನೆಸ್ ಲೈಕ್) ನಡೆಯಿತು ಅತ್ಯಂತ ಗಂಭೀರವಾಗಿ ನಡೆಯಿತು. ವಿಜಯವಾಡದ 11ನೇ ಅಧಿವೇಶನದಲ್ಲಿ "ಮೊರಾರ್ಜಿ ಜನತಾ ಆಡಳಿತೆಯ ಕುರಿತು ಕೊನೆಯಲ್ಲಿ ಮಾರ್ಕ್ಸ್‌ವಾದಿ ಪಕ್ಷವು ಕೈಗೊಂಡ ನಿಲುವು ಸರಿಯಾಗಿತ್ತೋ ಇಲ್ಲವೊ ಎಂಬುದರ ಕುರಿತು ಪಶ್ಚಿಮ ಬಂಗಾಳದ ಪ್ರತಿನಿಧಿಗಳು ಎತ್ತಿದ ವಿಷಯವು ಅಧಿವೇಶನದಲ್ಲಿ ಸಾಕಷ್ಟು ಸಮಯಕೊಂಡಿದ್ದರೆ, ಕೇರಳದಲ್ಲಿ ಪಾರ್ಟಿಯ ಮುಖ್ಯ ಕೆಲವು ಮುಂದಾಳುಗಳು ಪ್ರದರ್ಶಿಸಿದ "ಪಾರ್ಲಿಮೆಂಟರಿ ಸಂದರ್ಭವಾದ ರಾಜಕೀಯ ಮನೋಭಾವ, ಮತ್ತು ನಡೆಸಿದ ಫಾಕ್ಷನಿಸಂ (ಒಡಕುಗಾರಿಕೆ ಎಲ್ಲರ ಗಮನ ಸೆಳೆದಿತ್ತು.

"ಕಮ್ಯೂನಿಸ್ಟ್ ಪಕ್ಷವು ಒಂದು ವಿಶಿಷ್ಟ ಅಚ್ಚಿನಲ್ಲಿ ಎರಕಹೊಯ್ದ ಉಕ್ಕಿನ ಶಿಸ್ತಿನ ಪಕ್ಷ ಇದರಲ್ಲಿ ಗುಂಪುಗಾರಿಕೆಗೆ ಎಡೆಯೇ ಇಲ್ಲ" ಎಂದು ಕಾಂ ಸ್ಟಾಲಿನ್‌ರು ಹಾಕಿಕೊಟ್ಟ ದಾರಿಯಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ನಡೆಯುತ್ತಿದೆ ಎಂಬುದಕ್ಕೆ ಈ ಅಧಿವೇಶನವು ಸಾಕ್ಷಿಯಾಗಿತ್ತು.

"ಕೇರಳದ ಪ್ರತಿನಿಧಿಗಳು ಕೇರಳದಲ್ಲಿ ಪಾರ್ಟಿಯ ಘಟನೆಗೆ ಮೀರಿ ನಡೆಸಲಾದ ಗುಂಪುಗಾರಿಕೆಯ ಕುರಿತು ಸಮರ್ಪಕವಾದ ವಿವರಣೆ ಕೊಡಬೇಕು ಎಂದು ಕಾಂ| ಇ. ಎಂ ಎಸ್. ನಂಬೂದರಿಪಾಡರು ರಾಜಕೀಯ ಸಂಘಟನಾ ವರದಿಯನ್ನು ಸಮರ್ಪಿಸುವಾಗ ಆಡಿದ ಮಾತುಗಳು ಅಧಿವೇಶನದಲ್ಲಿ ವಿದ್ಯುತ್ ಸಂಚಾರವನ್ನುಂಟುಮಾಡಿತು.

ಶಾಂತಿ ಮತ್ತು ತಟಸ್ಥ ನೀತಿ

ಜಾಗತಿಕ ಶಾಂತಿ ಕಾಪಾಡುವ ವಿಷಯದಲ್ಲಿ ಮತ್ತು ಸಾಮ್ರಾಜ್ಯಶಾಹಿಗಳ ನೀತಿಯಿಂದ ಮೂರನೇಜಗತ್ತಿನ ರಾಷ್ಟ್ರಗಳನ್ನು ರಕ್ಷಿಸುವ ತಟಸ್ಥನೀತಿಯ ವಿಷಯದಲ್ಲಿ ಭಾರತ ಸರಕಾರವು ನಡೆಸುವ ಸರಿಯಾದ ಧೋರಣೆಯು ಭಾರತದ ಜನತೆಯ ಹಿತದೃಷ್ಟಿಯಿಂದ ಸರಿಯಾಗಿರುವುದರಿಂದ ಯಾವುದೇ ಹೆದರಿಕೆ ಇಲ್ಲದೆ ನಮ್ಮ ಪಕ್ಷವು ಅದನ್ನು ಬೆಂಬಲಿಸುತ್ತದೆ. ಅದೇ ವೇಳೆ ಭಾರತ ಸರಕಾರವು ರಾಜೀವಗಾಂಧಿಯವರ ನೇತೃತ್ವದಲ್ಲಿ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಯಿಂದಾಗಿ ಕ್ರಮೇಣ ಶಾಂತಿ ಮತ್ತು ತಟಸ್ಥ ನೀತಿ ಅನುಸರಿಸುವುದಕ್ಕೆ ಆತಂಕ ಬರಬಹುದು ಎಂಬ ಅಂಶವನ್ನು ರಾಜಕೀಯ ಠರಾವು ಎತ್ತಿ ತೋರಿಸಿತು. ಈ ಧೋರಣೆಗಳು ಭಾರತ ಜನಕೋಟಿಯ ಧೋರಣೆಗಳಾಗಿ ಬರುವಂತೆ ಮಾಡುವ ದಿಕ್ಕಿನಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ವಿಶಾಲ ಶಾಂತಿ ಚಳುವಳಿಯನ್ನು ಕಟ್ಟಬೇಕು ಮತ್ತು ತಟಸ್ಥಧೋರಣೆಯನ್ನು ವಾಸ್ತವವಾಗಿ ಜನಸಾಮಾನ್ಯರಲ್ಲಿ ವಿವರಿಸಿ ಮನದಟ್ಟು ಮಾಡಬೇಕು ಎಂದು ನಿರ್ದೇಶವಿತ್ತಿತು. ಇದರಲ್ಲಿ ನಮ್ಮ ಪಕ್ಷವು ತನ್ನ ಕಾರ್ಯಾಚರಣೆಯ ದೋಷಗಳನ್ನ ಗುರುತಿಸಿ ಸಂಪಡಿಸಿಕೊಳ್ಳಬೇಕು ಎಂದು ಅಧಿವೇಶನವು ಕರೆಕೊಟ್ಟಿತು

ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ

ಅಸ್ಸಾಂ, ಪಂಜಾಬ್, ಜಮ್ಮು ಮತ್ತು ಕಾಶ್ಮೀರ ಮತ್ತು ತಮಿಳುನಾಡುಗಳಲ್ಲಿ ನಮ್ಮ ಪಕ್ಷದ ಘಟಕಗಳು ಛಿದ್ರಕಾರಿ ಶಕ್ತಿಗಳ ವಿರುದ್ಧ ಧೀರ ಹೋರಾಟ ನಡೆಸಿದುದರಿಂದ ಪಕ್ಷವು ಮುನ್ನಡೆಯಿತು. ಈ ಅಂಶದ ವಿವರಣೆಗಳು ಸಮ್ಮೇಳನದಲ್ಲಿ ಪೊಲಿಟ್ ಬ್ಯೂರೊ ಸದಸ್ಯರಿಂದಲೂ, ಆ ರಾಜ್ಯಗಳ ಪ್ರತಿನಿಧಿಗಳಿಂದಲೂ ದೊರಕಿದಾಗ ನಮ್ಮ ಪಕ್ಷವು ಮಾತ್ರ ಇಡೀ ದೇಶದಲ್ಲಿ ತತ್ವಬದ್ಧವಾಗಿ ನಿಲುವು ತೆಗೆದುಕೊಂಡು ಹೋರಾಡುವ ಪಕ್ಷ ಎಂಬುದರ ಅರಿವು ಉಂಟಾಯಿತು. ದೇಶದಲ್ಲಿ ಇಂದು ಎಲ್ಲಾ ಬಂಡವಾಳ ಶಾಹಿ ಭೂಮಾಲಕ ಪಕ್ಷಗಳು ಕಾಂಗ್ರೆಸ್ಸು, ಜನತಾ, ಲೋಕದಳ, ಬಿಜೆಪಿ, ಇತ್ಯಾದಿ ಸವತಿಯಂತಹ ಎಡಪಕ್ಷವೂ "ಸಂದರ್ಭವಾದಿ ನಿಲುವುಗಳನ್ನು ತೆಗೆದುಕೊಳ್ಳುತ್ತಿರುವಾಗ, ಪರಿಣಾಮವಾಗಿ ಸಾಮ್ರಾಜ್ಯಶಾಹಿಗಳು ದೇಶದ ಒಳಗಡೆ ಈ ಛಿದ್ರಕಾರಿ ಶತ್ರುಗಳ ಮೂಲಕ ದೇಶವನ್ನು ಒಡೆಯಲು ಪ್ರಯತ್ನಿಸುತ್ತಿರುವಾಗ, ನಮ್ಮ ಪಕ್ಷವು ಈ ಶತ್ರುಗಳನ್ನು ಎದುರಿಸಿ ಹೋರಾಡಿ ದೇಶದ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸುವ ಶಕ್ತಿಯಾಗಿ ಬೆಳೆಯಬೇಕಾಗಿದೆ.

ರಾಷ್ಟ್ರವ್ಯಾಪಿಯಾಗಿ ಪಕ್ಷ ಬೆಳೆಯಬೇಕು

ಹಾಗೆ ಬೆಳೆಯಬೇಕಾದರೆ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ನಡೆಸುವ ನಮ್ಮ ಕ್ರಮಗಳಲ್ಲಿ ದಿಟ್ಟ ಬದಲಾವಣೆಯಾಗಬೇಕು. ಮುಖ್ಯವಾಗಿ ಪ್ರಾದೇಶಿಕ ಭಾವನೆ ಮತ್ತು "ಫೆಡರಲಿಸಂ" ತೊಲಗಬೇಕು. "ಗುತ್ತೇದಾರಿ ಬಂಡವಾಳ ಶಾಹಿಗಳ ನೇತೃತ್ವದಲ್ಲಿರುವ ಬಂಡವಾಳಶಾಹಿ—ಭೂಮಾಲಕ ವರ್ಗಗಳಂತಹ ವೈರಿ ಶಕ್ತಿಗಳಿಂದ ಅಧಿಕಾರವನ್ನು ದೇಶದಲ್ಲಿ ಕಾರ್ಮಿಕವರ್ಗದ ನೇತೃತ್ವದ "ಜನತಾ ಪ್ರಜಾಪ್ರಭುತ್ವಶಕ್ತಿಗಳಿಗೆ ಮತ್ತು ವರ್ಗಗಳಿಗೆ" ಕಿತ್ತುಕೊಳ್ಳಲು ಸಾಧ್ಯವಾಗಬೇಕಾದರೆ, ಅತ್ಯಂತ ಬಲಿಷ್ಠವಾದ ಕೇಂದ್ರೀಕೃತವಾಗಿ ನಡೆಯುವ ಕೇಂದ್ರವನ್ನು ಕಟ್ಟುವುದೊಂದೆ ಹಾದಿ, ಈ ಬಗ್ಗೆ ಪೊಲಿಟ್ ಬ್ಯೂರೊ ಸದಸ್ಯರು ಒಬ್ಬರ ನಂತರ ಇನ್ನೊಬ್ಬರು ಅಧಿವೇಶನದಲ್ಲಿ ವಿವರಣೆ ಕೊಟ್ಟಾಗ ಒಂದೆಡೆ "ಕ್ರಾಂತಿಕಾರಿ ಚಳುವಳಿಯು ನಮ್ಮ ದೇಶದಲ್ಲಿ ಬೆಳೆಯುವ ಹಾದಿಯ ಕುರಿತು ಬೆಳಕು ಚೆಲ್ಲಿದಂತಾಗುತ್ತಿತ್ತು. ಮತ್ತು ಪ್ರತಿನಿಧಿಗಳಲ್ಲೆಲ್ಲಾ ರೋಮಾಂಚನ ಉಂಟಾಗುತ್ತಿತ್ತು,

15 ಲಕ್ಷಕ್ಕಿಂತ ಅಧಿಕ ಬಹಿರಂಗ ಅಧಿವೇಶನ

ಬಂಗಾಳದ ಚರಿತ್ರೆಯಲ್ಲೇ ಈತನಕ ನಡೆಯದಷ್ಟು ದೊಡ್ಡ ಬಹಿರಂಗ ಅಧಿವೇಶನವನ್ನು ನಡೆಸಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಶಕ್ತಿಯನ್ನು ಪ್ರದರ್ಶಿಸಿದೆ. ತನ್ನ ಧೋರಣೆಗಳು ಬಂಗಾಳದ ಸಾಮಾನ್ಯ ಜನರ ಪಕ್ಷವಾಗಿ ಬೆಳೆದಿದೆ ಎಂಬುದಕ್ಕೆ, ಎಡರಂಗ ಸರಕಾರದ ಜನಪ್ರಿಯತೆ ಎಷ್ಟಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಎಲ್ಲಾ ರಾಜ್ಯಗಳ ಪ್ರತಿನಿಧಿಗಳಿಗೆ ಇದೊಂದು ಸ್ಫೂರ್ತಿ ಕೊಡುವ ಸಭೆಯಾಗಿತ್ತು.

ಅತ್ಯಂತ ಸ್ಫೂರ್ತಿ ಪಡೆದು ಕರ್ನಾಟಕದ ಪ್ರತಿನಿಧಿಗಳು 12ನೇ ಅಧಿವೇಶನದಿಂದ ಹಿಂತಿರುಗಿದ್ದಾರೆ. "ಕರ್ನಾಟಕದ ಚಳವಳಿಯ ಮುನ್ನಡೆಯೇ ಈ ಸ್ಫೂರ್ತಿ ಎಷ್ಟರಮಟ್ಟಿಗೆ ಕಾರ್ಯೋನ್ಮುಖವಾಗುತ್ತದೆ ಎಂದು ತೋರಿಸುತ್ತದೆ

ಬರಗಾಲ ಮತ್ತು ಭೂ ಸಂಬಂಧಗಳು

(1ನೇ ಪುಟದಿಂದ)

ಸಾಧ್ಯವಿಲ್ಲವೇ ? ಸಂಪೂರ್ಣ ಸಾಧ್ಯ. ಅಸಾಧ್ಯವಾಗುವುದು ಕೇವಲ ಎರಡು ಸಂದರ್ಭಗಳಲ್ಲಿ. ಪ್ರಕೃತಿಯ ನಿಯಮಗಳನ್ನರಿತೂ ಕೂಡ ಮಾನವರೆಲ್ಲರ ಬದುಕನ್ನು ಸುಗಮಗೊಳಿಸಲು ಅದನ್ನು ಬಳಸದಿದ್ದಾಗ ಹಾಗೂ ಮಾನವರೇ ಪ್ರಕೃತಿಯ ಶೋಷಣೆ ನಡೆಸಿದಾಗ! ಎಲ್ಲಜನತೆಯ ಸುಖಕ್ಕಾಗಿ ಶ್ರಮಿಸದ ಕೆಲವೇ ಜನರಿಗಾಗಿ ಇಡೀ ಪ್ರಕೃತಿಯನ್ನೇ, ಎಲ್ಲಾ ಮಿತಿಗಳನ್ನು ಮೀರಿ ಶೋಷಿಸುವ ಸಮಾಜವರ್ಗ ಸಮಾಜ ಮಾತ್ರ ಅದರಲ್ಲಿ ಈ ಶೋಷಣೆ ಗರಿಷ್ಠ ಮಟ್ಟವನ್ನು ಮುಟ್ಟುವುದು ಬಂಡವಾಳ ಶಾಹಿ ಸಮಾಜದಲ್ಲ ಮಾತ್ರ.

ಸೈಬೀರಿಯಾದಿಂದ ಉತ್ತರದ ಆರ್ಕ್‌ಟಿಕ್ ಸಾಗರಕ್ಕೆ ಹರಿಯುವ ನದಿಗಳ ಸಮೂಹವನ್ನೇ ಸಂಪೂರ್ಣ ವಿರುದ್ಧ ದಿಕ್ಕಿಗೆ ತಿರುಗಿಸಿ ಸೈಬೀರಿಯ ಶೀತಲ ಮರುಭೂಮಿಯನ್ನು ಕೃಷಿಯೋಗ್ಯ, ವಾಸಯೋಗ್ಯವನ್ನಾಗಿ ಮಾಡುವುದು ಸಾಧ್ಯವಿರಬೇಕಾದರೆ, 100 ಕೋಟಿಗೂ ಹೆಚ್ಚು ಜನರಿದ್ದರೂ ಕೃಷಿ ಯೋಗ್ಯ ಭೂಮಿ ಭಾರತದಷ್ಟೇ ಇರುವ ಚೀನಾದಲ್ಲಿ ನೆರೆ ಪ್ರವಾಹಗಳನ್ನು ತಡೆಗಟ್ಟಲು ಬರಗಾಲದ ಪರಿಣಾಮಗಳನ್ನೆದುರಿಸಲು ಸಾಧ್ಯವಾಗಿರಬೇಕಾದರೆ ಇಡೀ ದೇಶದ ಎಲ್ಲರಿಗೂ ಸಾಕಾಗುವಷ್ಟು ಆಹಾರವನ್ನು ತಮ್ಮ ಪ್ರದೇಶದಲ್ಲಿ ಬೆಳೆದು ಬರಗಾಲಪೀಡಿತ ಗಿರಿ ಪ್ರದೇಶಗಳಿಗೊಯ್ದು ಕೊಡುವುದು ಸಾಧ್ಯವಾಗಿರಬೇಕಾದರೆ, ಭಾರತದಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಶಾಶ್ವತ ನೀರಾವರಿ ಕ್ರಮವನ್ನು ಕೈಗೊಳ್ಳುವುದಾಗಲಿ ಗೋಡೌನುಗಳಲ್ಲಿ ತುಂಬಲಾಗದೆ ಹೊರಗೆ ಬಯಲೊಳಗೆ ಹರಡಿರುವ ಧಾನ್ಯವನ್ನು ಬರಗಾಲಪೀಡಿತರಿಗೆ ಒದಗಿಸುವುದು ಸಾಧ್ಯವೇಕಾಗುಗಿಲ್ಲ ? ಗಂಗಾ ಕಾವೇರಿ ಸಂಗಮವನ್ನೇ ಧಿಕ್ಕರಿಸುವ ಕಾಲುವೆಗಳ ಹಾರದಮಾತು ವಿಜಯನಗರದ ಉಕ್ಕಿನ ಕಾರ್ಖಾನೆಯ ಮಾತಿನಂತೆಯೇ ಅನೇಕ ಬಾರಿ ಬಂದು ಬಿದ್ದು ಹೋಯಿತು. ಕರ್ನಾಟಕದಲ್ಲಿಯೇ ಕಾಳಿಯಿಂದ ಹಿಡಿದು ಕೊಡಗಿನ ಬರಪೊಳೆಯವರೆಗೆ ಹಲವಾರು ಸಣ್ಣ ದೊಡ್ಡ ನದಿಗಳ ನೀರು ವ್ಯರ್ಥವಾಗಿ ದಿನೇ ದಿನೇ ಹಂದು ಅರೇಬಿಯಾ ಸಮುದ್ರವನ್ನು ಸೇರುತ್ತಿಲ್ಲವೆ ? ಲಿಂಗನಮಕ್ಕಿಯಲ್ಲಿ, ಕಾಳಿ ವಿದ್ಯುತ್ ಯೋಜನೆಗಳ ಅಣೆಗಳ ಜಾಲದಲ್ಲಿ ಹಿಡಿದಿಟ್ಟ ನೀರನ್ನು ವಿದ್ಯುತ್ ಉತ್ಪಾದನೆಯ ನಂತರ ಮತ್ತೆ ಸಮುದ್ರಕ್ಕೆ ಬಿಡುತ್ತಿಲ್ಲವೆ? ಕರ್ನಾಟಕದಲ್ಲಿಯೇ ಹರಿಯುವ ಕೃಷ್ಣ ಕಾವೇರಿಯರ ಸಂಪರ್ಕವನ್ನು ಸಾಧಿಸಿದರೆ, ಪಶ್ಚಿಮ ಘಟ್ಟಗಳ ನೀರನ್ನು ಹರಿಯಿಸಿದರೆ ಕರ್ನಾಟಕದಲ್ಲಿ ಮಳೆ ಆಶ್ರಿತ ಕೃಷಿ ಅನ್ವೇಶಿತ ಪ್ರದೇಶದ ಬಹುಭಾಗ ನೀರಾವರಿಯಾಗುವುದು ಸಾಧ್ಯ. ಬರಗಾಲವನ್ನು ಸಂಪೂರ್ಣವಾಗಿ ಹೊಡೆದೋಡಿಸುವುದು ಸಾಧ್ಯ. ಹಾಗಿದ್ದರೆ ಇಲ್ಲಿಯವರೆಗೆ ಇದು ಏಕೆ ಸಾಧ್ಯವಾಗಿಲ್ಲ? ಇದಕ್ಕೆ ಕಾರಣವಾದ ನಮ್ಮ ವರ್ಗ ಸಮಾಜದ ಸ್ವರೂಪವೇನು ?

ಬರಗಾಲ ಮತ್ತು ಭೂ ಸಂಬಂಧಗಳು

ಕೇಂದ್ರವನ್ನಾಳುವ ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ದಿಂದೀಚೆಗೆ ತಂದ ಎಲ್ಲಾ ಭೂ ಸುಧಾರಣೆಗಳನ್ನೂ ಮೀರಿ ಭೂಕೇಂದ್ರೀಕರಣ ಹೆಚ್ಚುತ್ತಲೇ ಇದೆ. ಇದರ ಪರಿಣಾಮ ಕೆಲವೇ ಜನಭೂಸ್ವಾಮಿಗಳು ಒಂದುಕಡೆ, ಅಸಂಖ್ಯಾತ ಕೃಷಿ ಕೂಲಿಕಾರರು ಮತ್ತೊಂದು ಕಡೆ. ಬರಗಾಲವೆಂಬುದು ಭೂಸ್ವಾಮಿಗಳನ್ನು ಕಾಡುವುದಿಲ್ಲ ಆದರೆ ಪ್ರಹಾರ ಆರಂಭವಾಗುವುದೇ ಕೃಷಿ ಕಾರ್ಮಿಕನಿಂದ ಬರೆಗಾಲದ ಪ್ರಮಾಣವನ್ನಳೆಯುವುದೇ, ಇಂತಹ "ವರ್ಷ ಎರಡೆತ್ತಿನವರೂ, ಕೂಡ ಗುಳೇಹೋದರು" ನಾಲ್ಕೆತ್ತು, ಚಕ್ಕಡಿಯವರೂ ನಿರ್ನಾಮವಾದರು ಎಂದು ರೈತನ ಸಂಪನ್ಮೂಲಗಳನ್ನು ಗುರುತಿಸಿ. ಆರಕ್ಕೆ ಮೂರಾಗಿ, ಒಂದಾಗಿ ಸೀದಾ ಹೋಗುತ್ತಿರುವ ರೈತನ ಸಂಪತ್ತನ್ನು ಕೊಳ್ಳುವವರು ಯಾರು ? ಕೊಳ್ಳುವರಿಲ್ಲದೇ. ಮಾರಲಿಕ್ಕೆ ಸಾಧ್ಯವೇ ? ಈ ಮಾರಾಟದಿಂದ ಮತ್ತಷ್ಟು ಸಂಪತ್ತಿನ ಕೇಂದ್ರೀಕರಣ ಹೆಚ್ಚುತ್ತದೆ ಹಾಗೆ ಬರಗಾವೆದಿಂದ ಬರಗಾಲಕ್ಕೆ ಭೂಸ್ವಾಮಿಗಳು ಧಡೂತಿ ಭೂಸ್ವಾಮಿಗಳಾಗುತ್ತಾರೆ. ಕೃಷಿ ಕಾರ್ಮಿಕರ ಸಂಕಟಕ್ಕೆ ಹೊಸದಾಗಿ ಮತ್ತೊಂದು ದೊಡ್ಡ ಪಡೆ ಸೇರುತ್ತದೆ.

ಈ ಕೃಷಿ ಕಾರ್ಮಿಕರ, ಬರಗಾಲದಲ್ಲಿ ಅಗ್ಗದಲ್ಲಿ ವಿಕ್ರಯವಾಗುವ ಶ್ರಮಶಕ್ತಿಯ ಪರಿಣಾಮವೇ "ಜೀತದಾಳು" ಪದ್ಧತಿ, "ದೇವದಾಸಿ" ಪದ್ಧತಿ ಮೊದಲಾದ ಪಾಳೆಯಗಾರಿ ಪಳೆಯುಳಿಕೆಗಳು ಈ ಪದ್ಧತಿಗಳು ಎಷ್ಟು ಕಾನೂನುಗಳನ್ನು ಮಾಡಿದರೂ ಮತ್ತಷ್ಟು ಶಕ್ತವಾಗಿ ಮುಂದುವರಿಯುತ್ತಲೇ ಹೋಗುವುದು ಮಾತ್ರವಲ್ಲ ಇಂತಹ ಸಮಯಕ್ಕಾಗಿಯೇ ಬಾಯಿ ಬಿಟ್ಟು ಕಾದು ಕುಂತ ಭೂಸ್ವಾಮಿಗಳು ಈ ಅಗ್ಗದ ಶ್ರಮ ಶಕ್ತಿಯ ಉಪಯೋಗದಿಂದ ತಮ್ಮ ವಿಸ್ತಾರವಾದ ಹೊಲಗಳಲ್ಲಿ ಭೂಅಭಿವೃದ್ಧಿ ಕ್ರಮ, ನೀರಾವರಿ ಕ್ರಮಗಳನ್ನು ಕೈಗೊಂಡು ಇನ್ನಷ್ಟು ಶ್ರೀಮಂತರಾಗುವುದು ಬಂಡವಾಳಶಾಹಿ ಭೂಸಂಬಂಧಗಳ ಬೆಳವಣಿಗೆಗೆ ಕಾರಣವಾಗುವುದು.

ಬರಗಾಲ ಕೈಗಾರಿಕೆಗಳ ಕಾರ್ಮಿಕರನ್ನು ಬಾಧಿಸುವ ರೀತಿ ಹಾಗೂ ಜನರ ದಾರುಣ ಪರಿಸ್ಥಿಗೆ ರಾಜೀವಗಾಂಧಿ ಹಾಗೂ ಹೆಗ್ಗಡೆಯವರು ತೋರಿಸಿದ ಕಾಳಜಿ ಏನು ಎಂಬುದನ್ನು ಮುಂದೆ ನೋಡೋಣ

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V.Temple Street, Sultanpet, Bangalore-560053 Editorial and managerial office, L-56, K. V. Temple Street, Sultanpet, B-53Phone : 75331
Editor P. Ramach andra Rao Managing Editor: N.K Upadhyaya